
# ಭಾರತ ಜ್ಞಾನ ವಿಜ್ಞಾನ ಸಮಿತಿ
# ಧ್ಯೇಯಗಳು, ಸಾಧನೆಗಳು ಗುರಿಗಳು.....
# ಮತ್ತು ಕನಸುಗಳು



# ಭಾರತ ಜ್ಞಾನ ವಿಜ್ಞಾನ ಸಮಿತಿ

## ಧ್ಯೇಯಗಳು, ಸಾಧನೆಗಳು
## ಗುರಿಗಳು . . . . . . . .
## ಮತ್ತು ಕನಸುಗಳು

ಭಾರತ ಜ್ಞಾನ ವಿಜ್ಞಾನ ಸಮಿತಿ
C/o ಎಲೆಕ್ಟ್ರೋ ಕೆಮಿಕಲ್ ಸೊಸೈಟಿ ಆಫ್ ಇಂಡಿಯಾ
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು – 560 012

ನಾಳಿನಾ ನಾಳಿನಾ ಕನಸನ್ನು ಕಾಣುವುದೆನ್ನ ಮನ......

---ಬೇಂದ್ರೆ



ಅನುವಾದಕರು :

ಕೆ.ಆರ್. ಬಸವರಾಜು
ಆರ್.ಕೆ.ಹುಡುಗಿ
ಎಚ್.ಎಸ್.ನಿರಂಜನಾರಾಧ್ಯ
ಸಿ.ಯತಿರಾಜು

ರೂ. ಎರಡು

ಕಲೆ : ಮಕಾಳಿ ಕೆ.

ಮುಖಪುಟ, ಒಳಪುಟ ವಿನ್ಯಾಸ

ಎಂ.ಎಚ್.ಶ್ರೀಧರಮೂರ್ತಿ

RB 11-2
05193
HEALTH CELL
LIBRARY AND DOCUMENTATION UNIT

# ಪರಿವಿಡಿ


- ಭಾರತ ..... ಅಂದು ..... ಇಂದು ..... ಮುಂದು ..... .....
- ಪ್ರಾರಂಭ : ಜನ-ವಿಜ್ಞಾನ ಆಂದೋಲನ- ಭಾರತ ಜ್ಞಾನ ವಿಜ್ಞಾನ ಜಾಥಾ .....
- ಭಾರತ ಜ್ಞಾನ ವಿಜ್ಞಾನ ಸಮಿತಿಯ ರಚನೆ ..... ..... ..... .....
- ಭಾರತ ಜ್ಞಾನ ವಿಜ್ಞಾನ ಜಾಥಾದ ಮುನ್ನೋಟ ..... ..... .....
- ಭಾರತ ಜ್ಞಾನ ವಿಜ್ಞಾನ ಜಾಥಾದ ಧ್ಯೇಯ ಧೋರಣೆಗಳು ..... ..... .....
- ಭಾರತ ಜ್ಞಾನ ಸಮಿತಿಯ ಸಾಧನೆಗಳು ..... ..... ..... .....
- ಕರ್ನಾಟಕದ ಬಿಜಿವಿಎಸ್ ..... ..... .....
- ಜಾಥಾ ಆದ ಒಂದು ವರ್ಷದ ನಂತರ ..... ..... .....
- ಭಾರತ ಜ್ಞಾನ ವಿಜ್ಞಾನ ಸಮಿತಿಯ ನಕ್ಷೆ
- ಸಾಕ್ಷರತೆಯ ನಂತರ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕನಸು .....
- ಸಂಸ್ಥೆ ..... ..... .....


4
BGVS

# ಭಾರತ ..... ಅಂದು.....



# ಇಂದು..... ಮುಂದು.....

ಐದು ಸಾವಿರ ವರ್ಷಗಳ ಹಿಂದೆ ಸಿಂಧೂ ಕಣಿವೆಯ ನಾಗರಿಕತೆ. ಮಹೇಂಜದಾರೋ ಮತ್ತು ಹರಪ್ಪ ಪಟ್ಟಣಗಳು ಹಾಗೂ ಲೋಪಲ್‌ನಂತಹ ಪ್ರಸಿದ್ಧ ಬಂದರುಗಳಿಂದ ಭಾರತವು ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಆದರೆ ಅವೆಲ್ಲ ಇಂದು ಎಲ್ಲಿ? ಅದರ ಹಿರಿಮೆ. ಗರಿಮೆಗಳೇನಾದವು?

ಭಾರತ ದೇಶವು ಚರಕ. ಸುಶ್ರುತ. ಜೀವಕ್ ಮತ್ತು ವಾಗ್‌ಭಟರಂತಹ ಶ್ರೇಷ್ಠ ಶಸ್ತ್ರವೈದ್ಯರನ್ನು ಬೆಳೆಸಿದ ನಾಡು. ಆರ್ಯಭಟ. ಬ್ರಹ್ಮಗುಪ್ತ. ವರಾಹಮಿಹಿರ. ಭಾಸ್ಕರರಂತಹ ಜಗತ್ಪ್ರಸಿದ್ಧವಾದ ಖಗೋಲಶಾಸ್ತ್ರಜ್ಞರನ್ನು ಗಣಿತಶಾಸ್ತ್ರಜ್ಞರನ್ನೂ ಕಂಡ ನಾಡು. ಆದರೆ ಅದೆಲ್ಲ ಇಂದು ಎಲ್ಲಿ? ಅದರ ಹಿರಿಮೆ ಗರಿಮೆಗಳೇನಾದವು?

ಅಶೋಕ ಸ್ತಂಭ. ತಾಜ್‌ಮಹಲ್‌ನಂತಹ ಶ್ರೇಷ್ಠ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗೆ ನೆಲೆಯಾಗಿ. ಕುಶಲಕಲೆ. ಉದ್ದಿಮೆಗೆ ಹೆಸರಾಗಿತ್ತು. ಆ ಸಾಧ್ಯತೆಗಳೆಲ್ಲ ಎಲ್ಲಿ?

ಈ ನಾಡು ಕಲೆಯ. ವಿದ್ಯೆಯ ಬೀಡಾಗಿತ್ತು. ನಳಂದ. ತಕ್ಷಶಿಲೆಗಳು. ಪಾಶ್ಚಾತ್ಯರನ್ನು ಜ್ಞಾನದಿಂದ ಆಕರ್ಷಿಸುತ್ತಿದ್ದವು. ಜಗತ್ತಿನ ನಾಲ್ಕೂ ಕಡೆಗಳಿಂದ ಜ್ಞಾನವನ್ನು ಅರಸಿ ಜನ ಇಲ್ಲಿ ಬರುತ್ತಿದ್ದರು. ಆದರೆ ಅದೆಲ್ಲಾ ಎಲ್ಲಿ? ಅದರ ಹಿರಿಮೆ ಏನಾಯಿತು?

ರೋಮನ್ನರನ್ನು. ಗ್ರೀಕರನ್ನು. ಚೀನಿಯರನ್ನು. ಅರಬರನ್ನು ಎಲ್ಲರನ್ನು ಸ್ವಾಗತಿಸಿದೆವು. ಪೋರ್ಚುಗೀಸರು. ಡಚ್ಚರು. ಫ್ರೆಂಚರು. ಬ್ರಿಟೀಷರು ವ್ಯಾಪಾರಿಗಳ ವೇಷದಲ್ಲಿ ಇಲ್ಲಿಗೆ ಬಂದರು. ಅವರ ಮೋಸ ತಿಳಿಯದೆ ಎಲ್ಲರನ್ನು ಸ್ವಾಗತಿಸಿದೆವು. ಅವರು ಎಲ್ಲವನ್ನೂ ವ್ಯಾಪಾರ ಮಾಡಿದರು. ರಾಜರನ್ನು. ರಾಜ್ಯಗಳನ್ನು. ವ್ಯಾಪಾರ ಮಾಡಿದರು. ರಾಜರು. ಭೂಮಾಲೀಕರು ಆಂತರಿಕ ಜಗಳಗಳಿಂದ ನಶಿಸಿದರು. ಒಂದು ದಿನ ರಾಜರುಗಳೇ ಇಲ್ಲವಾದರು. ಬ್ರಿಟೀಷ್ ರಾಜರು ಬಂದರು. ಭಾರತ ಕುಸಿಯಿತು. ಬ್ರಿಟಿಷ್ ಸಿಂಹದ ಪಂಜರದಲ್ಲಿ ಭಾರತ ಸಿಕ್ಕಿಕೊಂಡು ನರಳತೊಡಗಿತು.

ನಮ್ಮ ಜಗತ್ಪ್ರಸಿದ್ಧವಾದ ಢಾಕಾದ ಮಸಲಿನ್ ಬಟ್ಟೆಗಳ ಕಾರ್ಖಾನೆಗಳು ಏನಾದವು? ಗಾಳಿಯಷ್ಟು ತೆಳ್ಳಗಿದ್ದ ಬಟ್ಟೆಗಳು ಗಾಳಿಯಲ್ಲಿ ತೇಲಿಹೋದವೇ.

ಪ್ರಸಿದ್ಧ ರಾಸಾಯನ ಶಾಸ್ತ್ರಜ್ಞರು ನಶಿಸಿಹೋದರು. ನಮ್ಮ ಸಂಸ್ಕೃತಿ ಛಿದ್ರಗೊಂಡು ಅರ್ಥಹೀನವಾಯಿತು. ಇಂಗ್ಲಿಷ್. ಕಲಿತವರ ಭಾಷೆಯಾಯಿತು. ಆದರೂ ಅವರ ಸಂಖ್ಯೆ ಬಹಳ ಕಡಿಮೆ.

ದೇಶ ದಿವಾಳಿಯಾಯಿತು. ಬದುಕು ಸಹಿಸಲಸಾಧ್ಯವಾಯಿತು. ಕ್ಷಾಮ–ನೋವಿನಿಂದ ದೇಶ ನರಳಿತು.

ಜನ ನಿಧಾನವಾಗಿ ಗುಸುಗುಡಲಾರಂಭಿಸಿದರು. ಇದು ಸಾಧ್ಯವಿಲ್ಲವೆಂದು ಅಂದರು. ನಿಧಾನವಾಗಿ ಗುಸುಗುಸು ಯುದ್ಧ ಕೂಗಾಗಿ ಮೊಳಗಿತು. ಲಕ್ಷಾಂತರ ಗಂಟಲುಗಳಿಂದ ಕೂಗೆದ್ದಿತು. ಮಿಲಿಯಗಟ್ಟಲೆ ರೈತರು. ಮಕ್ಕಳು. ಹೆಂಗಸರು. ಕಾರ್ಮಿಕರ ಕೂಗು ಬಲಿಯಿತು.

ಅಲೆಗಳಂತೆ ಮೀರತ್. ದಂಡಿ. ಲಾಹೋರ್. ತೆಲಂಗಾಣದಿಂದ ಜನ ಪ್ರವಾಹ ಹರಿಯಿತು. ತಿಲಕ್. ಲಜಪತ್ ರಾಯ್. ಭಗತ್ ಸಿಂಗ್. ಆಜಾದ್. ಗಾಂಧಿ ಬೋಸ್‌ರಂತ ಸಹಸ್ರಾರು ನಾಯಕರು ವೀರರು ಹುಟ್ಟಿದರು.

ಕಡೆಗೆ ಒಂದು ದಿನ ಬ್ರಿಟೀಷ್ ಸಾಮ್ರಾಜ್ಯಶಾಹಿ ಮುಗಿಯಿತು. ಆದರೆ ಅವರು ದೇಶವನ್ನು ಒಡೆದು ಹಿಂಸಿಸಿದರು. ಅಣ್ಣತಮ್ಮಂದಿರನ್ನು ಹಿಂದೂ ಮತ್ತು ಮುಸಲ್ಮಾನರನ್ನಾಗಿ ಭೇದಿಸಿದರು.

ಆಗ ಆದ ಗಾಯಗಳು ಮಾಯಲೇ ಇಲ್ಲ. ಹಿಂದೂಗಳು. ಸಿಖ್ಖರು. ಮುಸಲ್ಮಾನರು. ಬೋಡೋಗಳು. ಮೀಜೋಗಳು ಒಬ್ಬರ ವಿರುದ್ಧ ಒಬ್ಬರು. ಪಂಜಾಬ್. ಕಾಶ್ಮೀರ. ಅಸ್ಸಾಂ. ಮೀಜೋರಾಂಗಳಲ್ಲಿ ಜಾತೀಯ. ಭಾಷೆಯ. ಪ್ರಾಂತ್ಯದ ಕಾರಣಗಳಿಂದ ದ್ವೇಷ ಹಬ್ಬಿದೆ. ಕನಸಿನ ಭಾರತ ಕುಸಿಯುತ್ತಿದೆ.

ನಮ್ಮೆಲ್ಲರಿಗೂ ಊಟ. ಬಟ್ಟೆ. ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಯುವಕರಿಗೆ ಉದ್ಯೋಗ. ವಯಸ್ಸಾದವರಿಗೆ ವಿಶ್ರಾಂತಿ ಎಲ್ಲಿ– ಆ ಕನಸಿನ ಸುಂದರ ಭಾರತ ಎಲ್ಲಿ? ನಮ್ಮ ಸುಭದ್ರ ಆರ್ಥಿಕ ವ್ಯವಸ್ಥೆ. ಪಂಚವಾರ್ಷಿಕ ಯೋಜನೆಗಳು ಗರೀಬಿ ಹಟಾವೋ ಅವೆಲ್ಲ ಎಲ್ಲಿ? ಅದೆಲ್ಲ ದುಃಖದ ನೋವಿನ. ಕತೆ. ಶಬ್ದಗಳು ಆ ನೋವನ್ನು ಹೇಳಲಾರವು.

ನಾವು ಜಗತ್ತಿನಲ್ಲೇ ಹೆಚ್ಚಿನ ಅನಕ್ಷರಸ್ಥರಾಗಿದ್ದೇವೆ. ಅತೀ ಬಡ ರಾಷ್ಟ್ರವಾಗಿದ್ದೇವೆ. ರೋಗಗ್ರಸ್ತರಾಗಿದ್ದೇವೆ. ನಮ್ಮ ಹೆಮ್ಮೆಯ ವಿದ್ಯಾಕೇಂದ್ರಗಳು. ಜೀವವೇ ಇಲ್ಲದ ಅಸ್ಥಿಪಂಜರಗಳಾಗಿವೆ. ಕಲಿಕೆಯ ಸಂಸ್ಕೃತಿಯ ಕೇಂದ್ರವಾಗಿದ್ದ ದೇವಾಲಯಗಳು ಕಲ್ಲು ಮಂಟಪಗಳಾಗಿವೆ. ಮೌಢ್ಯ. ವಿಕೃತಿಗಳ ತವರೂರಾಗುತ್ತಿವೆ.

ಬಾಂಬೆಯ ಪ್ರಸಿದ್ಧ ಹೋಟೆಲ್‌ಗಳು. ದೆಹಲಿಯ ಬೃಹತ್ ಬಂಗಲೆಗಳು ನಮ್ಮ

ಅದೃಷ್ಟವನ್ನು ಆಳಿಯುತ್ತಿವೆ. ಸಮಷ್ಟಿಯನ್ನು ಅಜ್ಞಾನದ, ಬಡತನದ, ಅನಾರೋಗ್ಯದ ಕಡೆಗೆ ತಳ್ಳುತ್ತಿದೆ. ಪ್ರಾಣಿಗಳೂ ಬದುಕದ ಹೇಯವಾದ ಜೀವನ ಸೃಷ್ಟಿಯಾಗುತ್ತಿದೆ.

ಸಮಾಜಘಾತುಕರು ಎಲ್ಲೆಲ್ಲೂ ಸುತ್ತುತ್ತಿದ್ದಾರೆ. ಅಣ್ಣತಮ್ಮಂದಿರು, ಅಕ್ಕತಂಗಿಯರನ್ನು, ಒಂದೇ ರಾಷ್ಟ್ರದ ಪ್ರಜೆಗಳನ್ನು ಒಡೆಯುತ್ತಿದ್ದಾರೆ. ನಮ್ಮನ್ನು ಅಭದ್ರಗೊಳಿಸುತ್ತಿದ್ದಾರೆ.

ತನ್ನ ತಾಯಿಯನ್ನು, ತಂಗಿಯರನ್ನು ಮಾರಿಕೊಳ್ಳುವ ನಾಚಿಕೆಹೀನ ಜನ ನಮ್ಮ ಸಮಾಜದಲ್ಲಿ ಹೆಚ್ಚುತ್ತಿದ್ದಾರೆ.

ನಮ್ಮ ದೇಶ ಚಿಂತಾಜನಕವಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಅಧೋಗತಿಯನ್ನು ತಲುಪುತ್ತಿದೆ. ಬೆಳೆಯುತ್ತಿರುವ ಪ್ರಕ್ಷುಬ್ದ ವಾತಾವರಣಗಳು, ಗರಿಷ್ಠ ಮಿತಿಯನ್ನು ತಲುಪಿವೆ. ಅತಿ ಸಣ್ಣ ಕಾರಣಕ್ಕೆ ಸಂವೇದನೆಗೆ ಜನ ಹೊಡೆದಾಡುತ್ತಿದ್ದಾರೆ. ಜಾತೀಯ, ಜನಾಂಗದ, ಸಂಸ್ಕೃತಿಯ, ಭಾಷೆಯ ಹೆಸರಿನಲ್ಲಿ ಜನ ಬಡಿದಾಡುತ್ತಿದ್ದಾರೆ. ನಮ್ಮ ಹಿರಿಯರು ಶ್ರಮದಿಂದ ಗಳಿಸಿದ ಸ್ವಾತಂತ್ರ್ಯ ವಿನಾಶದ ಅಂಚಿನಲ್ಲಿದೆ.

ರಾಜಕೀಯ ವಲಯದಲ್ಲಿ ನಿಧಾನವಾಗಿ ಸ್ವಜನಪಕ್ಷಪಾತ, ಸ್ವಹಿತ, ಗೂಂಡಾ ಪ್ರವೃತ್ತಿ ಭ್ರಷ್ಟತೆ ಬೆಳೆಯುತ್ತಿದೆ. ನಮ್ಮ ಸಾಮಾಜಿಕ ವ್ಯವಸ್ಥೆ ಅವ್ಯವಸ್ಥೆಯ ಕಡೆಯ ಘಟ್ಟವನ್ನು ಮುಟ್ಟುತ್ತಿದೆ.

ಇದು ಕೇವಲ ಭಾರತ ಒಂದರ ಕತೆಯಲ್ಲ, ಮೂರನೇ ಜಗತ್ತಿನ ರಾಷ್ಟ್ರಗಳ ಅಥವಾ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕತೆಯೆ ಸುಮಾರಾಗಿ ಹೀಗಾಗಿದೆ.

ಆರ್ಥಿಕವಾಗಿ, ತಾಂತ್ರಿಕವಾಗಿ ಮುಂದುವರೆದಿರುವ ರಾಷ್ಟ್ರಗಳು ತಮ್ಮ ಸ್ವಪ್ರತಿಷ್ಠೆಗೋಸ್ಕರ ಭೂಮಿಯ ಒಡೆತನಕ್ಕಾಗಿ ತಮ್ಮ ಶಕ್ತಿಯನ್ನು ಪ್ರದರ್ಶಿಸುತ್ತಿವೆ. ಅವರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿರುವ ಜನರನ್ನು ಕಳೆಗಳೆಂದುಕೊಂಡು ಅವುಗಳನ್ನು ಕಿತ್ತೊಗೆಯಲು ಹಾತೊರೆಯುತ್ತಿವೆ. ಅವರು ತಮ್ಮ ವೈಜ್ಞಾನಿಕ, ತಾಂತ್ರಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಅಸ್ತ್ರಗಳನ್ನು ಬಳಸುತ್ತಿವೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ರಾಜಕಾರಣಿಗಳು, ಅಧಿಕಾರಿಗಳು, ಇದನ್ನು ಇನ್ನು ಅರಿತೇ ಇಲ್ಲ. ಅವರೆಲ್ಲರೂ ವಾಸ್ತವವನ್ನು ಬಿಟ್ಟು ಬಹಳ ದೂರ ಇದ್ದಾರೆ. ಅವರು ಎಚ್ಚರಗೊಂಡು ಈ ಶೋಷಣೆ ವಿರುದ್ಧ ಸಮರ ಸಾರದಿದ್ದರೆ ಅವರ ಮೂಲಕ ರಾಷ್ಟ್ರದ ಅಧಃಪತನ ಖಂಡಿತ.

ಹಸಿದಿರುವ, ಅಜ್ಞಾನಿಗಳಾದ, ಶೋಷಿತರ ಕೂಗು ನಿಧಾನವಾಗಿ ಮೊಳಗುತ್ತಿದೆ! ಆಲಿಸಿ ನೀವೂ ಅದನ್ನು ಕೇಳಬಹುದು!!

ಅವರು ನಾವೂ ಮನುಷ್ಯರೆಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಯಾವುದೇ ಶಕ್ತಿ ಅವರನ್ನು ತಡೆಗಟ್ಟಲು ಸಾಧ್ಯವಿಲ್ಲ.

ಶೋಷಿತ ಮನುಷ್ಯ ಅಕ್ಷರ. ಅರಿವಿನ ಪುಸ್ತಕದ ಕಡೆಗೆ ಕೈಯನ್ನು ಚಾಚುತ್ತಿದ್ದಾನೆ. ಆತ ಈ ಕುಯುಕ್ತಿ. ಈ ನರಿಗಳ. ದುಷ್ಟ ಸಿಂಹಗಳ. ಸಮಾಜಘಾತುಕರ ವಿರುದ್ಧ ಹೋರಾಡಲು ಹೊಸ ಅಸ್ತ್ರವನ್ನು ಹುಡುಕುತ್ತಿದ್ದಾನೆ. ತನ್ನ ಹಸಿವು. ಬಡತನ. ಅಜ್ಞಾನ. ಅನಾರೋಗ್ಯಗಳನ್ನು ಹೋಗಲಾಡಿಸಲು ಅಕ್ಷರ ಒಂದು ಮಾರ್ಗವೆಂದು ತಿಳಿಯುತ್ತಿದ್ದಾನೆ. ಆತನ ಪುಸ್ತಕದ ತುಪಾಕಿಯಿಂದ ಅಕ್ಷರಗಳೆಂಬ ಗುಂಡುಗಳು ಸಿಡಿಯುತ್ತಿವೆ. ಏಕೆ ನಿಮಗೆ ಅದು ಕೇಳಿಸುತ್ತಿಲ್ಲವೇ?

ಆಲಿಸಿ. ನೀವು ಆತನ ನಿಟ್ಟುಸಿರನ್ನು ಕೇಳಬಹುದು. ನೀವು ನೋವಿನ ಶೋಷಣೆಯ ಬಡತನದ ಹಾಡುಗಳನ್ನು ಕೇಳುತ್ತಿಲ್ಲವೇ. ಆ ಹಾಡುಗಳನ್ನು ಕೇಳಿ. ನೀವೂ ಆ ಕೊರಲಿನೊಂದಿಗೆ ಸೇರಿ–ಸ್ವಾತಂತ್ರ್ಯದ ಕಡೆಗೆ. ನಮ್ಮ ಕನಸಿನ ಭಾರತವನ್ನು ಕಟ್ಟುವ ಕಡೆಗೆ.

ಸ್ನೇಹಿತರೇ. ನಾವು. ನಮ್ಮ ಕನಸಿನ ನವ ಚೈತನ್ಯವುಳ್ಳ ಭಾರತವನ್ನು ಕಟ್ಟಲು ಹೋರಾಡೋಣ. ಬಲಿಷ್ಠ ಮತ್ತು ಒಗ್ಗಟ್ಟಿನ ಭಾರತ. ಎಲ್ಲಿ ಎಲ್ಲರಿಗೂ ಊಟ. ವಸತಿ. ಬಟ್ಟೆ. ಮಕ್ಕಳಿಗೆ ಸಮಾನವಾದ ವಿದ್ಯಾಭ್ಯಾಸ. ಯುವಕರಿಗೆ ಉದ್ಯೋಗ ಮತ್ತು ಎಲ್ಲರಿಗೂ ಎಲ್ಲಿ ನೆಮ್ಮದಿಯ ವಿಶ್ರಾಂತಿ ದೊರೆಯುವುದೋ ಅಂತಹ ಸುಂದರ ಭಾರತವನ್ನು ಕಟ್ಟಲು ಮುನ್ನಡೆಯೋಣ.

ಮಿತ್ರರೇ. ನಾವು ಶಾಂತಿಯುತ. ಯುದ್ಧರಹಿತ ಪ್ರಪಂಚವನ್ನು ಮಾನವೀಯತೆಯನ್ನು ಬೆಳಸಲು ಹೋರಾಡೋಣ.


ನಾವು ಎಂದಾದರೂ ಹೋರಾಡಲು ಸಿದ್ಧರಿದ್ದರೆ ಅದು ಇಂದೇ ಆಗಲಿ ನಾಳೆಯೆಂದರೆ ಬಹಳ ತಡವಾಗುವುದು.

ಇದು ಭಾರತ ಜ್ಞಾನ ವಿಜ್ಞಾನ ಸಮಿತಿಯು ತನಗೆ ತಾನೇ ಹಾಕಿಕೊಂಡ ಧ್ಯೇಯ. ಜನರ. ರಾಜಕೀಯ ಪಕ್ಷಗಳ ಮನೋಭಾವವನ್ನು1930, 1940ರಲ್ಲಿದ್ದ ಮನೋಭಾವಕ್ಕೆ ಅನುಗುಣವಾಗಿ ಭಾರತದ ಏಕತೆಗಾಗಿ ಹೋರಾಡಲು ರೂಢಿಸಿದ ಧ್ಯೇಯ.

ಅದೃಷ್ಟದ ಮತ್ತು ಸಂಕುಚಿತದ ತಳಹದಿಯ ಮೇಲಿರುವ ಮನಸ್ಸುಗಳಿಗೆ ಆತ್ಮವಿಶ್ವಾಸ ಮೂಡಿಸಿ ಈಗಿನ ವರ್ತಮಾನವನ್ನು ಬದಲಿಸಿ ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಹೋರಾಡುವ ಧ್ಯೇಯ ಹೊಂದಿದೆ. ಅದಕ್ಕಾಗಿ ಸಾಕ್ಷರತಾ ಆಂದೋಲನವನ್ನು ಕೈಗೆತ್ತಿಕೊಂಡಿದೆ. ಸುಮಾರು ಮೂರು ಮಿಲಿಯನ್ ಸ್ವಯಂ ಸೇವಕರು ಸುಮಾರು ಮೂವತ್ತು ಮಿಲಿಯನ್ ಜನರನ್ನು ಅಕ್ಷರಸ್ಥರನ್ನಾಗಿ ಮಾಡಿಸುವ. ಬೃಹತ್ ಯೋಜನೆಯಲ್ಲಿ ಮಿಲಿಯನ್ ಜನ ಭಾರತದಾದ್ಯಂತ ತೊಡಗಿದ್ದಾರೆ. (ಒಂದು ಮಿಲಿಯನ್ ಹತ್ತು ಲಕ್ಷ) ಅವರಿಗೆ ತಾವು ಒಂದು ಬೃಹತ್ ಆಂದೋಲನದ ಅಂಗ ಎಂಬುದು ಮನವರಿಕೆಯಾಗಿದೆ.

ಇದೇ ಕಡೆಯಲ್ಲ. ಈ ಆಂದೋಲನ ಹೊಸ ಜಾಗೃತ ಭಾರತವನ್ನು.

ಪ್ರಜಾಪ್ರಭುತ್ವವೆಂದರೆ ಕೇವಲ ಮತ ಚಲಾಯಿಸುವುದೇ ಅಲ್ಲ. ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಹತ್ತಾದ ಪಾತ್ರವನ್ನು ವಹಿಸಬೇಕು. ಸ್ವಯಂಪೂರ್ಣ. ಸ್ವಾವಲಂಬಿ. ಐಕ್ಯ ರಾಷ್ಟ್ರಕ್ಕಾಗಿ ಹೋರಾಡುವ ಎಂಬ ಮಹತ್ತಾದ ಧ್ಯೇಯವನ್ನು ಹೊಂದಿದೆ. ■



# ಪ್ರಾರಂಭ : ಜನ ವಿಜ್ಞಾನ ಆಂದೋಲನ ಮತ್ತು ಭಾರತ ಜನ ವಿಜ್ಞಾನ ಜಾಥಾ

ಜನ ವಿಜ್ಞಾನ ಆಂದೋಲನದ ಅನುಭವದ ಮೂಲಕ ಭಾರತ ಜ್ಞಾನ-ವಿಜ್ಞಾನ ಜಾಥಾ ಉದಯವಾಯಿತು. ಅವರಲ್ಲೂ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ತನ್ನ ಸಾಂಸ್ಕೃತಿಕ ಮತ್ತು ಜಾನಪದ ಮಾಧ್ಯಮದಿಂದ ಬೃಹತ್ ಜಾಗೃತಿ ಕಾರ್ಯಕ್ರಮ ಇದರ ಆಧಾರವಾಯಿತು. ಅಖಿಲ ಭಾರತ ಜಾಥವನ್ನು 1985ರ ಮೇ ನಲ್ಲಿ ಭೂಪಾಲ್ ದುರಂತದಲ್ಲಿ ಸತ್ತ ಅಮಾಯಕ ಮುಗ್ಧ ಜನರ ನೆನಪಿಗಾಗಿ ನಡೆಸಲಾಯಿತು. ಅಲ್ಲಿಂದ ಆರಂಭವಾಗಿ ಕೆ.ಎಸ್ಎಸ್.ಪಿ. ಕರ್ನಾಟಕ. ಮಹಾರಾಷ್ಟ್ರ. ಆಂಧ್ರಪ್ರದೇಶಗಳ ವಿಜ್ಞಾನಾಂದೋಲನಗಳ ಸಹಾಯದಿಂದ ಆದ ಜಾಥಾ ಅನೇಕ ಭಾಷೆಯ ಕಲಾವಿದರನ್ನು ಒಗ್ಗೂಡಿಸಲು ಸಹಾಯ ಮಾಡಿತು. ಕೆ.ಎಸ್.ಎಸ್.ಪಿ. 1980ರಿಂದಲೂ ಇಂತಹ ಕಲಾ ಜಾಥಾಗಳನ್ನು ನಡೆಸುತ್ತಿತ್ತು. 'ಕಲೆಯ ಮೂಲಕ ವಿಜ್ಞಾನ' ನಂತರ. ಕರ್ನಾಟಕ. ತಮಿಳುನಾಡು. ಪುದುಚೇರಿ ಮತ್ತು ಗುಜರಾತ್ ರಾಜ್ಯಗಳಲ್ಲಿ ಇಂತಹ ಜಾಥಾಗಳನ್ನು ನಡೆಸಲಾಗುತ್ತಿತ್ತು. ಭಾರತದಾದ್ಯಂತ 1987ರ ಅಕ್ಟೋಬರ್-ನವೆಂಬರ್ ಜಾಥಾ (ಬಿಜೆವಿಜೆ)ಯು ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ನಡೆಯಿತು.




ಅಖಿಲ ಭಾರತ ವಿಜ್ಞಾನ ಆಂದೋಲನಕ್ಕೆ ಸೇರಿದ 26 ಸಂಸ್ಥೆಗಳು ಅಕ್ಟೋಬರ್ 2ರಿಂದ ನವಂಬರ್ 7, 1987ರವರೆಗೆ ಮುಖ್ಯ ವಿಜ್ಞಾನ ಆಂದೋಲನವನ್ನು. ವಿಜ್ಞಾನದ ಪ್ರಸರಣೆಗೆ ನಡೆಸಿದವು. ಈ ಭಾರತ ಜನ ವಿಜ್ಞಾನ ಜಾಥಾ

(ಬಿಜಿವಿಜೆ) ಐದು ವಿಭಾಗೀಯ ಜಾಥಾಗಳನ್ನು, ಸಾವಿರಾರು ಸಾಗಣೆ ಕೇಂದ್ರಗಳನ್ನು, ವಿಜ್ಞಾನಿಗಳನ್ನು, ಅಧ್ಯಾಪಕರುಗಳನ್ನು ಕಲಾವಿದರನ್ನು ಹೊಂದಿತ್ತು. ಇವರೆಲ್ಲಾ ಸುಮಾರು 25,000 ಕಿಲೊ ಮೀಟರ್‌ರನ್ನು ಕ್ರಮಿಸಿ 500 ಆಯ್ದ ಸ್ಥಳಗಳಲ್ಲಿ ಸಭೆಗಳನ್ನು ನಡೆಸಿ ಕಡೆಗೆ ಭೂಪಾಲ್‌ನಲ್ಲಿ ನವಂಬರ್ 7ರಂದು ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಿದರು.


ಭಾರತ ಜನ ವಿಜ್ಞಾನ ಜಾಥ ಅನೇಕ ರೀತಿಯಲ್ಲಿ ಸಫಲವಾಗಿದೆ. ಅದು ವಿಜ್ಞಾನ ಪ್ರಸಾರಕ್ಕಾಗಿ ಸಾವಿರಾರು ವ್ಯಕ್ತಿಗಳನ್ನು ಸಕ್ರಿಯಗೊಳಿಸಿದೆ. ಅದು ಅನೇಕ ಸಂಘ-ಸಂಸ್ಥೆಗಳನ್ನು ಈ ನಿಟ್ಟಿನಲ್ಲಿ ಜೋಡಿಸಿ ಅದಕ್ಕೆ ಹೊಸ ಆಯಾಮ ನೀಡಿದೆ. ಅದು ಎಲ್ಲ ಪ್ರದೇಶದ ಜನರಿಂದಲೂ ಆಶಾದಾಯಕ ಸೂಚನೆಯನ್ನು ಪಡೆದಿದೆ.

ಪ್ರಾರಂಭದಲ್ಲಿ ಭಾರತ ಜನ ವಿಜ್ಞಾನ ಜಾಥ ತನ್ನ ಕಾರ್ಯಕ್ಷೇತ್ರವನ್ನು ಕೇವಲ ನಗರ ಮತ್ತು ಪಟ್ಟಣಗಳಲ್ಲಿ ಮಾತ್ರ ಮೀಸಲಿರಿಸಿತ್ತು. ಇಂತಹ ಕಾರ್ಯಕ್ರಮಗಳನ್ನು ಹಳ್ಳಿಗಳ ಮಟ್ಟಕ್ಕೆ ಕೊಂಡೊಯ್ಯಲು ಸಮಾಜದ ಸಹಸ್ರಾರು ಜನರ ಸಹಕಾರ ಅದಕ್ಕೆ ಬೇಕಾಗಿದೆ. ಈ ಉದ್ದೇಶದಿಂದ ಸುಮಾರು ಅರವತ್ತು ಸಾವಿರ ಹಳ್ಳಿಗಳನ್ನು ನೇರವಾಗಿ ಮತ್ತು ಲಕ್ಷ ಹಳ್ಳಿಗಳನ್ನು ಪರೋಕ್ಷವಾಗಿ ಮುಟ್ಟುವ ಬೃಹತ್ ಯೋಜನೆಯನ್ನು ಹೊಂದಿದೆ. ■



# ಭಾರತ ಜ್ಞಾನ ವಿಜ್ಞಾನ ಸಮಿತಿಯ ರಚನೆ


ಭಾರತ ಜ್ಞಾನ ವಿಜ್ಞಾನ ಸಮಿತಿಯ ಜನನಕ್ಕೆ ಎರಡು ಅಂಶಗಳು ಕಾರಣವಾದವು. ಒಂದು ಭಾರತ ಜನ ವಿಜ್ಞಾನ ಜಾಥಾದ ಯಶಸ್ಸು ಮತ್ತು ಅದರ ಮಿತಿಗಳು ಜನರ. ವಿಜ್ಞಾನ ಆಂದೋಲನ ಬೃಹತ್ ಯೋಜನೆಯಾದ ಸಾಕ್ಷರತಾ ಆಂದೋಲನಕ್ಕೆ ಇನ್ನು ಬೃಹತ್ತಾಗಿ ಬೆಳೆಯಬೇಕೆಂಬುದರ ಫಲವೇ ಭಾರತ ಜ್ಞಾನ-ವಿಜ್ಞಾನ ಸಮಿತಿಯ ಹುಟ್ಟು. ಅಕ್ಷರ ಕಲಿಕೆಯೇ ಸಹಸ್ರಾರು ಜನರನ್ನು ಒಗ್ಗೂಡಿಸಬಲ್ಲ ಆಂದೋಲನ. ಯಾರು ಬಡತನದಿಂದ. ಶೋಷಣೆಯಿಂದ ನರಳುತ್ತಿರುವರೋ. ಯಾರಿಗೆ ಅಭಿವೃದ್ಧಿ ಕಾರ್ಯಗಳು ಮುಟ್ಟುತ್ತಿಲ್ಲವೋ ಅಂತಹವರಿಗೂ ನೇರವಾಗಿ ತಲುಪುವ ಆಂದೋಲನ ಸಾಕ್ಷರತಾ ಆಂದೋಲನ. ಶಿಕ್ಷಣವಿಲ್ಲದಿದ್ದರೆ ವಿಜ್ಞಾನವನ್ನು ಹರಡುವುದು ಅಸಾಧ್ಯ.



ಮತ್ತೊಂದು ಅಂಶ. ಬದಲಾಗುತ್ತಿರುವ ವಯಸ್ಕರ ಶಿಕ್ಷಣದ ರೂಪರೇಷೆಗಳು. ವಯಸ್ಕರ ಶಿಕ್ಷಣದ ಮಿತಿಗಳು. ಹೊಸ ಆಂದೋಲನಕ್ಕೆ ದಾರಿ ಮಾಡಿಕೊಟ್ಟವು. ಭಾರತ ಜ್ಞಾನ-ವಿಜ್ಞಾನ ಜಾಥವೂ ಸಾಕ್ಷರತಾ ಜಾಥಾವನ್ನು ನಡೆಸಬೇಕೆಂಬ ಸಲಹೆಯನ್ನು 1988ರ ಮೊದಲ ರಾಷ್ಟ್ರೀಯ ಸಾಕ್ಷರ ಆಯೋಗದ ಸಭೆಯಲ್ಲಿ (NLMA) ತೀರ್ಮಾನಿಸಲಾಯಿತು.

ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು 'ಭಾರತ ಜ್ಞಾನ ವಿಜ್ಞಾನ ಸಮಿತಿ' ಎಂಬ ಸಂಸ್ಥೆಯನ್ನು ಡಾ. ಮಾಲಕಮ್ ಎಸ್. ಆದಿಶೇಷಯ್ಯ ಇವರ ನೇತೃತ್ವದಲ್ಲಿ ಡಾ.ಎಂ.ಪಿ. ಪರಮೇಶ್ವರನ್ ಅವರು ಕಾರ್ಯದರ್ಶಿಯಾಗಿ

ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ನೋಂದಾಯಿಸಲಾಯಿತು. ಸರಕಾರಿ ಸಂಸ್ಥೆಗಳು, ಅಧಿಕಾರಿಗಳು, ಶಿಕ್ಷಣ ತಜ್ಞರು, ಸಮಾಜ ಸೇವಕರು, ಅನೇಕ ಕಲಾವಿದರು, ಇದರಲ್ಲಿ ಪಾಲ್ಗೊಂಡರು. ಈ ಸಂಸ್ಥೆಯು 13ಜನರ ಕಾರ್ಯ ನಿರ್ವಾಹಕ ಸಮಿತಿಯನ್ನು ಆರಿಸಿತು ಮತ್ತು ಅದರ ಮುಖ್ಯ ಕಛೇರಿಯನ್ನು ನವದೆಹಲಿಯಲ್ಲಿ ಸ್ಥಾಪಿಸಲಾಯಿತು. ■



# ಭಾರತ ಜ್ಞಾನ ವಿಜ್ಞಾನ ಜಾಥಾದ ಮುನ್ನೋಟ ( ಬಿಜೆವಿಜೆ )

ಸಂಕುಚಿತವಾದಿಗಳು, ಸಮಾಜಘಾತುಕರು, ಜಾತಿವಾದಿಗಳು ಕೋಮು ಗಲಭೆಯನ್ನು ಹತ್ತಿಸುವವರು ದೇಶದ ಭದ್ರ ನೆಲೆಗಳನ್ನು ಅಲುಗಿಸುತ್ತಿದ್ದಾಗ ಬಿಜೆವಿಜೆಯನ್ನು ಸ್ಥಾಪಿಸಲಾಯಿತು. ಆದರೆ ಈಗಿನ ಸ್ಥಿತಿಯೂ ಏನೂ ಬದಲಾಗಿಲ್ಲ.

ವಿಜ್ಞಾನದ ಮೌಲ್ಯಗಳು ಮತ್ತು ಜ್ಞಾನ ಎಲ್ಲರಿಗೂ ಸಮಾನವಾದ ಏಕತೆ ಸಾಧ್ಯತೆಗಳನ್ನು ಮೂಡಿಸಿ ಭಿನ್ನಾಭಿಪ್ರಾಯಗಳನ್ನು ತೊಡೆದು, ಜನಪರ ದೃಷ್ಟಿಯನ್ನು ಬೆಳೆಸುತ್ತದೆ. ಜಾತಿ ಭೇಧಗಳನ್ನು ತಡೆಯುತ್ತದೆ.

ಪ್ರತ್ಯೇಕ ಜಾತಿ, ಮತ, ಭಾಷೆ, ಪ್ರಾಂತಶ ಭಾವಗಳನ್ನು ಮರೆತು ನಾವೆಲ್ಲರೂ ಭಾರತೀಯರು ಎಂದು ಒಂದಾದ ಕಾಲವೊಂದಿತ್ತು. ಆಗ ಎಲ್ಲರೂ ಬ್ರಿಟೀಷ್ ಸಾರ್ವಭೌಮತ್ವದ ವಿರುದ್ಧ ಹೋರಾಡುತ್ತಿದ್ದರು. ಒಂದು ಸಾಮಾನ್ಯವಾದ ಶತ್ರುವಿನೊಡನೆ ಹೋರಾಡುವಾಗ ಜನ ತಮ್ಮ ಮಧ್ಯದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆಯುತ್ತಾರೆ. ಅಂತಹ ಮನೋಭೂಮಿಕೆ ಸೃಷ್ಟಿಯಾಗಿ ಜನ ಅನಕ್ಷರತೆ ಮತ್ತು ಬಡತನವನ್ನು ಸಾಮಾನ್ಯ ಶತ್ರು ಎಂದು ಪರಿಗಣಿಸುವರೆ? ಈ ಆಶಯಗಳು ಬಿಜೆವಿಜೆಯ ಘೋಷಣೆಗೆ ಎಡೆ ಮಾಡಿಕೊಟ್ಟವು. 'ದೇಶದ ಐಕ್ಯತೆ ಮತ್ತು ಸ್ವಾವಲಂಬನೆಗಾಗಿ ಸಾಕ್ಷರತೆ ಮತ್ತು ವಿಜ್ಞಾನ'.



ಆದರೆ ಈ ಕನಸು ನಿಜವಾಗಬಹುದೇ? ಅನಕ್ಷರತೆಯನ್ನು ನಿರ್ಮೂಲನಗೊಳಿಸಲು ಸಾಧ್ಯವೇ? ಸಾಮಾಜಿಕ ಕ್ರಾಂತಿಯಿಂದ ಮಾತ್ರ ಇದು ಸಾಧ್ಯ ಎಂದು ವಾದವೆದ್ದಿತು. ಸಾಕ್ಷರತಾ ಆಂದೋಲನ ಸಾಮಾಜಿಕ ಬದಲಾವಣೆಯನ್ನು ಮಾಡಲು ಸಾಧ್ಯವೇ?..... ಮಿಲಿಯಗಟ್ಟಲೆ ಸ್ವಯಂ ಸೇವಕರು, ಹತ್ತು ಮಿಲಿಯಗಟ್ಟಲೆ ಜನರನ್ನು ಸಾಕ್ಷರರನ್ನಾಗಿ ಮಾಡಲು ಹೊರಟಿರುವಾಗ

ಅಂತಹ ಕ್ರಾಂತಿಯಾಗಬಹುದೇ. ಇದಕ್ಕೆ ಯಾವುದೇ ಐತಿಹಾಸಿಕ ದಾಖಲೆಗಳಿಲ್ಲ. ಹಾಗಂತ ಆಗುವುದಿಲ್ಲ ಎನ್ನಲು ಸಾಧ್ಯವಿಲ್ಲ. ಬಿಜಿವಿಜೆಯು ಈ ಸರಪಳಿ ಕ್ರಿಯೆಯನ್ನು ಸಕ್ರಿಯಗೊಳಿಸಲು ಯಶಸ್ವಿಗೊಳಿಸಲು ಅನೇಕ ಸಂಶೋಧನೆಗಳನ್ನು ಕೈಗೊಂಡಿದೆ.

ಸಾಕ್ಷರತ ಆಂದೋಲನ ಕೇವಲ ಅಕ್ಷರ ಕಲಿಸಿ ತನ್ನ ಕೆಲಸ ಇಲ್ಲಿಗೆ ಮುಗಿಯಿತೆಂದು ನಿಲ್ಲಬಾರದು. ಅದು ಜನರ ಅಧಃಪತನದ ಕಾರಣವನ್ನು ಅವರೊಂದಿಗೆ ಹುಡುಕಬೇಕು. ಅವರ ಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಆದರೆ ಅವರಿಗೆ ಕೇವಲ ಓದು ಬರಹವೇ ಮೂಲಭೂತವಾಗಿ ಆಗಬೇಕಾಗಿರುವ ಕಾರ್ಯ. ಬಹಳ ಕಾಲದಿಂದಲೂ ಅದು ಅವರಿಗೆ ಲಭ್ಯವಾಗಿಲ್ಲ. ಆದ್ದರಿಂದ ಬಿಜಿವಿಜೆಯ ಮುಖ್ಯ ಗುರಿ ರಾಷ್ಟ್ರದ ಜನರನ್ನು 'ಓದಲು ಬರೆಯಲು ಅರ್ಹರನ್ನಾಗಿಸುವುದು'.

ಮಾತು ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸಿತು. ಆದರೆ ಬರಹ ಕ್ರಾಂತಿಯನ್ನೇ ತಂದಿದೆ. ಕೇವಲ ಹೆಸರು ಬರೆಯಲು ಸಾಧ್ಯವಾಗುವಷ್ಟು ವಿದ್ಯೆ ಸಾಲದು. ಬರೆಯುವುದು. ವ್ಯವಸಾಯದಂತೆ. ಮೀನು ಹಿಡಿಯುವಂತೆ ಸ್ವಾಭಾವಿಕವಾಗಬೇಕು.

ಆದರೆ ರಾಷ್ಟ್ರೀಯ ಸಾಕ್ಷರತಾ ಆಂದೋಲನ ಸಮೀಕ್ಷೆಯ ಮಿತಿಗಳು ಬಹಳ ಸಂಕುಚಿತವಾಗಿದ್ದವು. ಅವುಗಳು ತನ್ನ ಮಿತಿ ದಾಟಿ ಈಗ ತಿಳಿಯಬೇಕಾಗಿದೆ.

ಹೊಸ ಅಕ್ಷರಸ್ಥ. ಅನಕ್ಷರತೆಯಿಂದ ಸಂಪೂರ್ಣ ಮುಕ್ತನಾಗಿರಬೇಕು. ಯಾರದೇ ಸಹಾಯವಿಲ್ಲದೆ ಬರಹ. ಪ್ರಪಂಚದಲ್ಲಿರುವ ಅಗಾಧ ಜ್ಞಾನ ಸಂಪತ್ತನ್ನು ತಿಳಿದುಕೊಳ್ಳಲು ಸಮರ್ಥನಾಗಿರಬೇಕು. ಈಗಿನ ಸಾಮಾಜಿಕ ಸ್ಥಿತಿಯನ್ನು ಬದಲಿಸಿ ಉಜ್ವಲ ಭವಿಷ್ಯವನ್ನು ರೂಪಿಸಬಲ್ಲವು ಎಂಬ ಆತ್ಮವಿಶ್ವಾಸವೂ ಅವರಲ್ಲಿ ಬೆಳೆಯಬೇಕು. ■





# ಭಾರತ ಜ್ಞಾನ ವಿಜ್ಞಾನ ಜಾಥಾದ ಧ್ಯೇಯ ಧೋರಣೆಗಳು

ಆ ಮೊದಲೇ ಹೇಳಿದಂತೆ ಬಿಜಿವಿಜೆನ ಗುಣಾತ್ಮಕ ಮತ್ತು ಪರಿಣಾತ್ಮಕ ಧ್ಯೇಯ ಧೋರಣೆಗಳು ಮಹತ್ವಾಕಾಂಕ್ಷಿಯಾಗಿದ್ದವು. ಅದರ ಗುಣಾತ್ಮಕ ಗುರಿಗಮ್ಯಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ದೇಶದಲ್ಲಿ ನಡೆದಿರುವ ಸರಕಾರಿ ಮತ್ತು ಸರಕಾರೇತರ ದೊಡ್ಡ ಸಣ್ಣ ಎಲ್ಲಾ ಸಾಕ್ಷರತಾ ಪ್ರಯತ್ನಗಳನ್ನು ಅನೌಪಚಾರಿಕವಾಗಿ ಒಗ್ಗೂಡಿಸಿ ಅವರೆಲ್ಲರೂ ಒಂದೇ ರಾಷ್ಟ್ರೀಯ ಮಹಾ ಧ್ಯೇಯಕ್ಕಾಗಿ ದುಡಿಯುತ್ತಿರುವವರು ಎಂಬ ಭಾವನೆಯನ್ನು ಸೃಷ್ಟಿಸುವುದು.

2. ಕಲಿಯುವವರಲ್ಲಿ ಕಲಿಯಬೇಕೆಂಬ ಬಯಕೆಯನ್ನು ಸಾಕಷ್ಟು ಸೃಷ್ಟಿಸಲು ಅವಶ್ಯವಿರುವ ಉತ್ಸಾಹ ಮತ್ತು ಸ್ಫೂರ್ತಿಯನ್ನು ಸಾಕ್ಷರತಾ ಕಾರ್ಯಕರ್ತರಲ್ಲಿ ತುಂಬುವುದು.

3. ಎಲ್ಲಾ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಾಕ್ಷರತಾ ಕಾರ್ಯಕರ್ತರ ಮಧ್ಯೆ ಸಂಬಂಧ ಏರ್ಪಟ್ಟು, ಅವರು ಶಕ್ತಿ ಸಂಮರ್ಥಿಸಿಕೊಳ್ಳಲು ಅವಶ್ಯವಿರುವ ಮಾಹಿತಿಯನ್ನು ತ್ವರಿತವಾಗಿ ಒದಗಿಸಲು ಒಂದು ಅನೌಪಚಾರಿಕ ಯಂತ್ರವನ್ನು ಅಭಿವೃದ್ಧಿ ಪಡಿಸುವುದು.

4. ಅನಕ್ಷರತೆಯನ್ನು ತೊಡೆದು ಹಾಕಬೇಕು ಎಂಬ ಘೋಷಣೆಯನ್ನು ದೇಶದ ಮೂಲೆ ಮೂಲೆಗೂ ತಲುಪಿಸುವುದು.

5. ಜಾಥಾದ ಮೂಲಕ ಮತ್ತು ಜಾಥಾಪೂರ್ವೋತ್ತರ ಚಟುವಟಿಕೆಗಳ ಮೂಲಕ ಸಾಕ್ಷರತೆ ಮತ್ತು ವೈಜ್ಞಾನಿಕ ತಿಳುವಳಿಕೆಯ ಮುನ್ನೋಟವನ್ನು ಅತ್ಯಂತ ಹೆಚ್ಚಿನ ಸಂಖ್ಯೆ ಜನರಿಗೆ ತಿಳಿಸುವುದು.

6. ಈಗಾಗಲೇ ಅವು ಅಸ್ತಿತ್ವದಲ್ಲಿರದ ಸ್ಥಳಗಳಲ್ಲಿ ಸಾಕ್ಷರತಾ ಕೇಂದ್ರಗಳನ್ನು ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯುವಂತೆ ಬೇಡಿಕೆಯನ್ನು ಸೃಷ್ಟಿಸುವುದು.

7. ಅನಕ್ಷರತೆಯನ್ನು ತೊಲಗಿಸಿ ಜನತೆಯಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವ ಅವಶ್ಯವಿರುವ ಮಹಾಕಾರ್ಯಭಾರವನ್ನು ನಿರ್ವಹಿಸಲು ಸ್ವಯಂಸೇವಕ ಸಂಸ್ಥೆಗಳನ್ನು ಸ್ಥಳೀಯ ಹೊಸ-ಹೊಸ ಗುಂಪುಗಳನ್ನು ವ್ಯಕ್ತಿವಿಶಿಷ್ಟರನ್ನು ಏಕಗೊಳಿಸಿ ಅವರಿಗೆ ಹೊಸ ಪ್ರೇರಣೆಯನ್ನು ನೀಡುವುದು ಮತ್ತು ಸಾಕ್ಷರತೆಗಾಗಿ ಅವರ ಶಕ್ತಿ ಸಾಮರ್ಥ್ಯವನ್ನು ಹುರಿಗೊಳಿಸುವುದು.

8. ಈಗಾಗಲೇ ಸಾಕ್ಷರತೆ ಮತ್ತು ವೈಜ್ಞಾನಿಕ ಅರಿವಿನ ಪ್ರಸಾರಕ್ಕಾಗಿ ಪ್ರಯತ್ನಿಸುತ್ತಿರುವ ಸ್ವಯಂ ಸೇವಾ ಸಂಘ-ಸಂಸ್ಥೆಗಳನ್ನು ಕ್ರೋಢೀಕರಿಸಿ ಅವು ಇನ್ನು ಅನುಕೂಲಕರವಾದ ಪರಿಸ್ಥಿತಿಯಲ್ಲಿ ಎತ್ತರಕ್ಕೆ ಬೆಳೆಯುವಂತೆ ಮಾಡುವುದು. ಅವುಗಳ ಶಕ್ತಿ ಮತ್ತು ಪ್ರಯತ್ನಕ್ಕೆ ಇಂಬುಕೊಡುವುದು.

9. ಪರಿಣಾಮಾತ್ಮಕ ಗುರಿ ಧೋರಣೆಗಳನ್ನು ಹೀಗೆ ಸಂರಕ್ಷಿಸಬಹುದು.

ಅ. ದೇಶದ ಪ್ರತಿಯೊಂದು ಜಿಲ್ಲೆಗೂ ಒಂದರಂತೆ ಸುಮಾರು 500 ಜಿಲ್ಲೆಗಳಲ್ಲಿ 1990ರ ಅಕ್ಟೋಬರ್ 2 ರಿಂದ ನವಂಬರ್14ರವರೆಗೆ ಜಿಲ್ಲಾ ಮಟ್ಟದ ಜಾಥಾಗಳನ್ನು ಸಂಘಟಿಸುವುದು. ಪ್ರತಿಯೊಂದು ಜಾಥಾ 100 ರಿಂದ 150 ಕೇಂದ್ರಗಳಿಂದ ತಲುಪಿ ಅಲ್ಲಿ ಬೀದಿ ನಾಟಕ, ಹಾಡುಗಳು ಭಿತ್ತಿಪತ್ರಗಳು, ಸ್ಲೈಡ್ ಇತ್ಯಾದಿ ಮಾಧ್ಯಮಗಳ ಮೂಲಕ ಜಾಥಾದ ಧ್ಯೇಯ ಧೋರಣೆಗಳನ್ನು ತಿಳಿಸಿ ಹೇಳುವುದು.

ಆ. ಈ ಮೇಲೆ ಹೇಳಿದ ಪ್ರತಿ ಜಿಲ್ಲೆಯ 100 ರಿಂದ 150 ಕೇಂದ್ರಗಳ ಸುತ್ತಲಿನ ಊರುಗಳಿಗೆ ಸುಮಾರು 5 ರಿಂದ 10 ಪಾದಯಾತ್ರೆಗಳನ್ನು ಕೈಗೊಳ್ಳುವುದು.

ಇ. ಈ ಕಾರ್ಯಕ್ರಮಕ್ಕೆ ಅವಶ್ಯವಿರುವ ಪುಸ್ತಿಕೆಗಳನ್ನು ವಿಡಿಯೋ ಮತ್ತು ಆಡಿಯೋ ಕ್ಯಾಸೆಟ್‌ಗಳನ್ನು ಪೋಸ್ಟರ್‌ಗಳನ್ನು ಮತ್ತು ಸ್ಲೈಡ್‌ಗಳನ್ನು ನಿರ್ಮಿಸಿ ಒದಗಿಸುವುದು.

ಈ. ರಾಷ್ಟ್ರಮಟ್ಟದ ಕಮ್ಮಟಗಳಲ್ಲಿ ಗುರುತಿಸಲಾದ ಗುಂಪು ಮತ್ತು

ಸಂಘಟನೆಗಳಿಂದ ರಚಿಸಲ್ಪಟ್ಟ ಹಾಡು–ನಾಟಕ, ಉಪನ್ಯಾಸಕಗಳನ್ನು, ವಿವಿಧ ಪ್ರಾಂತೀಯ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡುವುದು.


ಈ ಮೇಲಿನ ಚಟುವಟಿಕೆಗಳನ್ನು ಜಾರಿಗೊಳಿಸಲು ಸ್ಥಳೀಯ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಏಕಕೇಂದ್ರಿತ ಸಂಘಟನೆಯನ್ನು ರಚಿಸುವುದು. ಅಂದರೆ ರಾಷ್ಟ್ರಮಟ್ಟದ ಸಂಘಟನೆಯಲ್ಲಿದ್ದು ಅದರ ಸುತ್ತಲೂ ರಾಜ್ಯ ಮಟ್ಟದ ಸಂಘಟನೆ, ರಾಜ್ಯ ಮಟ್ಟದ ಸಂಘಟನೆಯ ಸುತ್ತಲೂ ಜಿಲ್ಲಾ ಮಟ್ಟದ ಸಂಘಟನೆ, ಜಿಲ್ಲಾ ಸಂಘಟನೆಯ ಸುತ್ತಲೂ ಸ್ಥಳೀಯ ಸಂಘಟನೆಗಳು ಏರ್ಪಟ್ಟು, ರಾಷ್ಟ್ರದಾದ್ಯಂತ ಸಾಮಾಜಿಕವಾಗಿ ಪ್ರಜ್ಞಾವಂತರಾದ ವ್ಯಕ್ತಿಗಳನ್ನು ಗುಂಪುಗಳನ್ನು, ಸ್ವಯಂ ಸೇವಾ ಸಂಘಟನೆಗಳನ್ನು ಒಳಗೊಳ್ಳುವುದು. ಯುವಕ–ಯುವತಿಯರುಗಳು, ವಿದ್ಯಾರ್ಥಿಗಳು, ಮಹಿಳಾ ಸಂಘಟನೆಗಳು ಶಿಕ್ಷಕರ ಸಂಘಟನೆಗಳು, ಶೈಕ್ಷಣಿಕ ಮತ್ತು ಸಂಶೋಧನ ಸಂಸ್ಥೆಗಳು ರೈತ – ಕಾರ್ಮಿಕ ಸಂಘಗಳು ಸಾಮಾಜಿಕ ಕಾಳಜಿ ಮತ್ತು ಪ್ರಜ್ಞೆವುಳ್ಳ ಎಲ್ಲವೂ, ಎಲ್ಲರನ್ನು ಈ ಮಹತ್ತರ ಕಾರ್ಯಕ್ಕೆ ತೊಡಗಿಸುವುದು. ■



# ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಾಧನೆಗಳು

ಅಂತರ ರಾಷ್ಟ್ರೀಯ ಸಾಕ್ಷರತಾ ವರ್ಷದಲ್ಲಿ ದೇಶದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಕಲಾಜಾಥವನ್ನು ಸಂಘಟಿಸುವುದೇ ಭಾರತ ಜ್ಞಾನ ವಿಜ್ಞಾನ ಸಮಿತಿಯ ಪ್ರಪ್ರಥಮ ಕಾರ್ಯಭಾರವಾಗಿತ್ತು. 1990ರ ಅಕ್ಟೋಬರ್ 2ರಿಂದ ನವಂಬರ್ 14ರವರೆಗೆ ನಡೆಸಲಾದ ಭಾರತ ಜ್ಞಾನ ವಿಜ್ಞಾನ ಜಾಥಾದ ಉದ್ದೇಶ ತುಂಬಾ ವ್ಯಾಪಕವಾಗಿತ್ತು. ಭಾರತದ ಮೂಲೆಮೂಲೆಗೆ ತಲುಪಿ ಅನಕ್ಷರತೆಯ ಪಿಡುಗನ್ನು ಹೊಡೆದೋಡಿಸುವ ಕರೆಯನ್ನು ಮೊಳಗಿಸುತ್ತಾ ಸರಕಾರ ಮತ್ತು ಸರಕಾರೇತರ ಮಟ್ಟದಲ್ಲಿ ನಡೆಯುತ್ತಿದ್ದ ಎಲ್ಲಾ ಸಾಕ್ಷರತಾ ಪ್ರಯತ್ನಗಳನ್ನು ಸಂಯೋಜಿಸುತ್ತಾ ಹಿರಿಯ-ಕಿರಿಯರೆನ್ನದೆ ಸಾಕ್ಷರತೆಗಾಗಿ ದುಡಿಯುತ್ತಿರುವ ಎಲ್ಲಾ ಸಂಘಸಂಸ್ಥೆಗಳ ಪ್ರಯತ್ನವನ್ನು ಏಕಗೊಳಿಸುತ್ತಾ ಅವೆಲ್ಲವುಗಳಲ್ಲಿ ತಾವು ಒಂದೇ ಮಹತ್ತರ ಗುರಿಗಾಗಿ ಶ್ರಮಿಸುತ್ತಿದ್ದೇವೆ ಎಂಬ ಭಾವನೆಯನ್ನು ಉದ್ದೀಪನಗೊಳಿಸಲಾಗಿತ್ತು.

ತಾವೆಲ್ಲರೂ ಒಂದೇ ರಾಷ್ಟ್ರೀಯ ಮಹ ಮಣಿಹವನ್ನು ಹೊತ್ತಿದ್ದೇವೆ ಎಂಬ ಭಾವನೆಯನ್ನು ಕುದುರಿಸಲಾಗಿತ್ತು. ಇದೆಲ್ಲಕ್ಕೂ ಮುಖ್ಯವಾಗಿ ಜನತೆಯಲ್ಲಿ ಸಾಕ್ಷರತೆಗಾಗಿ ಒಂದು ಅದಮ್ಯ ಹಂಬಲವನ್ನು ಮೂಡಿಸುವ ವಾತಾವರಣವನ್ನು ಸೃಷ್ಟಿಸುತ್ತಾ ಆ ಅಪೂರ್ವ ಹಂಬಲವನ್ನು ಈಡೇರಿಸಲೂ ಸಮರ್ಥವಾಗಿ ಸ್ಪಂದಿಸಬಹುದಾದ ಒಂದು ಜನತೆಯ ಯಂತ್ರವನ್ನು ನಿರ್ಮಿಸಲೂ ಸಹಾಯ ಮಾಡಲಾಗಿತ್ತು.



ಇನ್ನೂ ಕೇವಲ ರೂಪುರೇಷೆಯ ಹಂತದಲ್ಲಿದ್ದ ಜಿಲ್ಲಾ ಕೇಂದ್ರಗಳ ಮಾರ್ಗದರ್ಶನದಲ್ಲಿ ಸುಮಾರು 200 ಜನ ಸಾಕ್ಷರತಾ ರಾಯಭಾರಿಗಳು, ಸುಮಾರು 350 ಜಿಲ್ಲಾ ಸಂಚಾಲಕರು ಮತ್ತು ಸಾವಿರಾರು ಜನ ತಾಲ್ಲೂಕು ಮತ್ತು ಗ್ರಾಮ ಮಟ್ಟದ ಕಾರ್ಯಕರ್ತರ ಸಹಾಯದಿಂದ ಸುಮಾರು 20 ಜನ ರಾಜ್ಯಮಟ್ಟದ

ಸಂಘಟಕರು ಜಾಥಾ ಸಂಘಟನೆಯಂಥ ಮಹತ್ತರ ಜವಾಬ್ದಾರಿಯನ್ನು ಹೊತ್ತು ಬಂದು ಭಗೀರಥ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು. ಜಾಥಾಗಳಿಗೆ ಪೂರ್ವ ಭಾವಿಯಾಗಿ ನಡೆದ ಯಶಸ್ವಿ ಚಟುವಟಿಕೆಗಳು ಜಾಥಾಗಳ ಸಂಪೂರ್ಣ ಸಫಲತೆಗೆ ಇಂಬುಕೊಟ್ಟವು. ರಾಷ್ಟ್ರ, ರಾಜ್ಯ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಾವಿರಾರು ತರಬೇತಿ ಶಿಬಿರಗಳನ್ನು ಕಮ್ಮಟಗಳನ್ನು ಸಂಘಟಿಸಲಾಗಿತ್ತು. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಹತ್ತಾರು ಸಾವಿರ ಸಮಿತಿಗಳನ್ನು ರಚಿಸಲಾಗಿತ್ತು. ಉಪನ್ಯಾಸ ಕಾರ್ಯಕ್ರಮಗಳು, ಉಪನ್ಯಾಸಕರಿಗೆ, ತರಬೇತಿ, ಸಾಕ್ಷರತಾ ಸಮೀಕ್ಷೆ, ಸ್ವಯಂ ಸೇವಕರ ಆಯ್ಕೆ, ಸಾಕ್ಷರತಾ ಸಪ್ತಾಹದ ಆಚರಣೆ, ಕಲಾಜಾಥಾಕ್ಕಾಗಿ ಸಾಹಿತ್ಯ ರಚನೆಯ ಶಿಬಿರಗಳು ನಾಟಕ ಮತ್ತು ಹಾಡುಗಳ ಸಿದ್ಧತೆಗಾಗಿ ನಡೆಸಲಾದ ತರಬೇತಿ ಶಿಬಿರಗಳು – ಮುಂತಾದವುಗಳೇ ಜಾಥಾಪೂರ್ವದ ಚಟುವಟಿಕೆಗಳಾಗಿದ್ದವು.

ಬಿಜಿವಿಜೆ ಕಾರ್ಯಕ್ರಮಗಳನ್ನು ದೇಶದ ಎಲ್ಲಾ ಜಿಲ್ಲೆ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲೂ ನಡೆಸುವ ಸರ್ವ ಪ್ರಯತ್ನವನ್ನು ಮಾಡಲಾಯಿತು. ಆದರೂ ಅನೇಕ ಕಾರಣಗಳಿಂದಾಗಿ ಜಮ್ಮು-ಕಾಶ್ಮೀರ, ಗೋವಾ, ಮಿಜೋರಾಂ, ನಾಗಾಲ್ಯಾಂಡ್, ಅರುಣಾಚಲಪ್ರದೇಶ, ಮೇಘಾಲಯ ಮತ್ತು ಸಿಕ್ಕಿಂನಲ್ಲಿ ಕಾರ್ಯಕ್ರಮ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಉಳಿದ 412 ಜಿಲ್ಲೆಗಳ ಪೈಕಿ 371 ಜಿಲ್ಲೆಗಳಲ್ಲಿ ಬಿಜಿವಿಎಸ್ ಸಂಘಟನೆಗಳನ್ನು ರೂಪಿಸಿ 304 ಜಿಲ್ಲೆಗಳಲ್ಲಿ ಕಲಾಜಾಥಾ ತಂಡಗಳು ಮತ್ತು ಸುಮಾರು 1800 ಚಿಕ್ಕ ತಂಡಗಳು ಸರಿ ಸುಮಾರು 40,000 ಗ್ರಾಮಗಳಿಗೆ ನೇರವಾಗಿ ತಲುಪಿ ಸಾಕ್ಷರತಾ ಕಾರ್ಯಕ್ರಮಗಳನ್ನು ನೆರವೇರಿಸಿದ್ದವು. ಒಟ್ಟು ಉದ್ದೇಶಿಸಿದ್ದ 60,000 ಗ್ರಾಮಗಳ ಪೈಕಿ 40,000 ಗ್ರಾಮಗಳಿಗೆ ತಲುಪಿದುದು ಒಂದು ದಾಖಲೆಯೇ ಸರಿ.

ಅನೇಕ ಗ್ರಾಮಗಳಲ್ಲಿ ಈ ಕಲಾಜಾಥಾವು ಒಂದು ನವೀನ ಅನುಭವಕೊಟ್ಟಿತು. ಅದರ ವಿಶೇಷತೆಯೆಂದರೆ ಅದು ತುಂಬಾ ಸರಳವೂ ನೇರವಾಗಿ ಹೃದಯಕ್ಕೆ ತಾಕುವಂತೆ ಬೋಧಪ್ರದವೂ ಆಗಿತ್ತು. ಹೀಗಾಗಿ ಕಲಾಜಾಥಾದ ಸಂದೇಶ ತಕ್ಷಣವೇ ಜನಮನವನ್ನು ಸೂರೆಗೊಂಡಿತು. ಜಾಥಾದಲ್ಲಿ ಭಾಗವಹಿಸಿದ ಸೃಜನಶೀಲ ಕಲಾವಿದರು, ನಟರು, ಹಾಡುಗಾರರು, ಒಂದು ವಿಶಿಷ್ಟ ಅನುಭವದೊಂದಿಗೆ ಜಾಗೃತಗೊಂಡರು. ತತ್‌ಪರಿಣಾಮವಾಗಿ ಸಾವಿರಾರು ಕವನ, ನಾಟಕಗಳ ಸೃಜನಶೀಲ ನವಸೃಷ್ಟಿಯ ಸುರಿಮಳೆಯಾಗಿತ್ತು. ಹೀಗೆ ಹರಿದು ಬಂದ ಎಲ್ಲಾ ಹಾಡು ನಾಟಕಗಳಲ್ಲಿ ಸಂವೇದನಾಶೀಲ ಹೃದಯಗಳು ತಮ್ಮನ್ನು ತಾವು ಬಿಚ್ಚಿಕೊಂಡಿದ್ದು ಯಾರೂ ನೋಡಬಹುದು. ಭಾಷೆ, ಪ್ರಾಂತ್ಯಗಳ ಭೇದವಿಲ್ಲದೆ ಈ ಎಲ್ಲಾ ಸೃಜನಶೀಲ ಕೃತಿಗಳನ್ನು ಒಗ್ಗೂಡಿಸಿ ಸಂಪಾದಿಸಿ ಹೊರತರುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಸೋಜಿಗದ

ಸಂಗತಿಯೆಂದರೆ ಇವುಗಳಲ್ಲಿಯೂ ಅನೇಕ ಕೃತಿಗಳು ಕಾಗದದ ಮೇಲೆ ಮೂಡಿಬರದೇ ನೇರವಾಗಿ ಮೌಖಿಕವಾಗಿಯೇ ಹೊರ ಹೊಮ್ಮಿದವುಗಳಾಗಿವೆ.

ಬಿರುಗಾಳಿಯಂತೆ ಎದ್ದ ಕಲಾಜಾಥಾ ಕಾರ್ಯಕ್ರಮದ ನಂತರ ಈಗ ಸಾವಕಾಶವಾಗಿ ಅದರ ಸಾಧನೆಯ ಹಿರಿಮೆಗರಿಮೆಗಳು ಗೋಚರವಾಗುತ್ತಿವೆ. ಅವುಗಳನ್ನೆಲ್ಲಾ ಕ್ರೋಢೀಕರಿಸಿ ಒಗ್ಗೂಡಿಸುವ ಕೆಲಸ ಸಾಗುತ್ತಿದೆ.

ಮೊದಲನೆಯದಾಗಿ ಜಾತಿ, ಮತೀಯ ಮಾಧ್ಯಮಗಳ ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾಗಿ ಬಂದರೂ ಭಾರತ ಜ್ಞಾನ ವಿಜ್ಞಾನ ಜಾಥಾ ಇವೆಲ್ಲವನ್ನೂ ಮೀರಿ ಮೆಟ್ಟಿ ನಿಂತು ಸಾಕ್ಷರತೆಯ ಗಂಭೀರ ಸಮಸ್ಯೆಯನ್ನು ಜನತೆಯ ಕಣ್ಮುಂದೆ ಇಟ್ಟು ಇದನ್ನು ಸಾಧಿಸಲು ಬೇಕಾಗುವ ಅನುಕೂಲಕರ ವಾತಾವರಣವನ್ನು ಸೃಷ್ಟಿಗೊಳಿಸಿತ್ತು. ಅಂದರೆ ಸಾಕ್ಷರತೆಯ ಕನಸು ನನಸಾಗಲು ಎಲ್ಲಾ ಜಿಲ್ಲೆ, ರಾಜ್ಯಮಟ್ಟಗಳಲ್ಲಿ ಸಾವಿರಾರು ರಾಜಕಾರಣಿಗಳನ್ನು, ಆಡಳಿತಗಾರರನ್ನು, ಶಿಕ್ಷಣ ತಜ್ಞರನ್ನು ಮತ್ತು ಸಮೂಹ ಮಾಧ್ಯಮಗಳ ಸಕಲ ಶಕ್ತಿ ವಿಶಿಷ್ಟರನ್ನು ಒಳಗೊಂಡು ಒಟ್ಟಾರೆ ತೊಡಗಿರುವುದರ ಮೂಲಕ ಮಾತ್ರ ಅನಕ್ಷರತೆಯನ್ನು ತೊಡೆದು ಹಾಕುವ ಕನಸನ್ನು ನನಸಾಗಿಸುವುದು ಸಾಧ್ಯ ಎಂಬ ಸತ್ಯವನ್ನು ಸಾಬೀತುಗೊಳಿಸಿದೆ. ಜೊತೆಗೆ ಜನತೆಯಲ್ಲಿ ಸಾಕ್ಷರತೆಗಾಗಿ ಅದಮ್ಯ ಹಂಬಲ ಮೂಡಿಸಿ ಸಾಕ್ಷರತಾ ಕಾರ್ಯಕ್ರಮಗಳಿಗಾಗಿ ಗ್ರಾಮ ಗ್ರಾಮಗಳಲ್ಲಿ ಬೇಡಿಕೆಗಳನ್ನು ಸೃಷ್ಟಿಸುತ್ತಾ ಸಾಕ್ಷರತಾ ಕಾರ್ಯಕ್ರಮವು ರಾಷ್ಟ್ರ ರಾಜಕೀಯ ಆದ್ಯತೆಯನ್ನು ಪಡೆಯುವಂತೆ ಮಾಡಿದೆ.

ಎರಡನೆಯದಾಗಿ ಬಿಜಿವಿಜೆ ಜಾಥಾವು ವಿಭಿನ್ನ ಸ್ವಯಂ-ಸೇವಾ ಸಂಘಟನೆಗಳನ್ನು, ವಿಜ್ಞಾನ ಆಂದೋಲನಗಳನ್ನು ವ್ಯಕ್ತಿ ಮತ್ತು ಗುಂಪುಗಳನ್ನು ಕಾರ್ಮಿಕ ಸಂಘಗಳೂ ಮತ್ತು ಸೇವಾಸಂಘಗಳನ್ನು ಅಷ್ಟು ಏಕೆ? ಯುವಕರು, ವಿದ್ಯಾರ್ಥಿಗಳು, ಮಹಿಳಾ ಆಂದೋಲನದ ಕಾರ್ಯಕರ್ತೆಯರು ಮತ್ತು ವಯಸ್ಕರ ಶಿಕ್ಷಣ ತಜ್ಞರು-ಮುಂತಾದವರನ್ನು ಒಂದೆಡೆಗೆ ತಂದಿತ್ತು. ಜಾಥಾದಲ್ಲಿ ಇವರೆಲ್ಲರ ಮತ್ತು ಸಂಘಟನಾತ್ಮಕ ಆದ್ಯತೆಯನ್ನಾಗಿ ಪರಿವರ್ತಿಸಿ, ಸಾವಿರಾರು ಜನರನ್ನು ಸಂಯೋಜಿಸಿ ಹೆಣೆದು ಒದೇ ವೇದಿಕೆಗೆ ತಂದು ನಿಲ್ಲಿಸಿತು. ಅನೇಕ ಬುದ್ಧಿ ಜೀವಿಗಳು ಮತ್ತು ಸಾಮಾಜಿಕ ಕಾರ್ಯಕರ್ತರಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿ ಒಂದು ಹೊಸ ಆಸೆ ಅಂಕುರಿಸುವಂತೆ ಮಾಡಿದೆ. ತನ್ಮೂಲಕ ಸಾಮಾಜಿಕ ಬದಲಾವಣೆಗಾಗಿ ಅವರು ನಡೆಸುತ್ತಿರುವ ಹೋರಾಟಕ್ಕೆ ಹೊಸ ಅರ್ಥವನ್ನು ನೀಡಿದೆ. ಅಷ್ಟೇ ಮುಖ್ಯವಾಗಿ ಸಾವಿರಾರು ಜನ ಬುದ್ಧಿಜೀವಿಗಳು, ಅಷ್ಟೇ ಮುಖ್ಯವಾಗಿ ನೌಕರರು, ವಿದ್ಯಾರ್ಥಿ ಯುವಜನರಿಗೆ ಭಾರತ ಜ್ಞಾನ ವಿಜ್ಞಾನ ಪರೀಕಾರರನ್ನಾಗಿಸಿದೆ. ಅವರೆಲ್ಲರಿಗೆ ನವ ದೀಕ್ಷೆ ಇತ್ತು, ಸಾಮಾಜಿಕ ಚಟುವಟಿಕೆಯ ಹೊಸ ದಿಕ್ಕಿನೆಡೆಗೆ ಮುನ್ನಡೆಸುತ್ತಿದೆ. ಎಲ್ಲಾ ಸಿನಿಕತನದ ಶಕ್ತಿಗಳನ್ನು ದುರ್ಬಲಗೊಳಿಸುತ್ತಾ ಸಾಕ್ಷರತೆಯ ಬಗ್ಗೆ ಜನತೆಯಲ್ಲಿ ಮನೆ



RB 11.2
05193
COMMUNITY HEALTH LIBRARY AND DOCUMENTATION UNIT

ಮಾಡಿದ ಅಸಡ್ಡೆ ಔದಾಸೀನ್ಯವನ್ನು ನಿರ್ಮೂಲಗೊಳಿಸಿದೆ.

ಮೂರನೆಯದಾಗಿ ಎರ್ನಾಕುಲಂನ ಅಪೂರ್ವ ಸಫಲತೆಯ ಕಥೆ ಸಾಕ್ಷರತೆಗಾಗಿ ಬೃಹತ್ ಜನಾಂದೋಲನದ ಸಂದೇಶವನ್ನು ದೇಶದ ಉದ್ದಗಲಕ್ಕೂ ಬಿತ್ತರಿಸಲೂ ಸಾಧ್ಯವಾಯಿತು. ಕೇರಳದಲ್ಲಿ ಉದ್ಭವಿಸಿದ 'ಸಾಕ್ಷರತಾ ಸಾಂಕ್ರಾಮಿಕ' ಒಂದಾದ ಮೇಲೊಂದರಂತೆ ಅನೇಕ ಜಿಲ್ಲೆಗಳಿಗೆ ಪಸರಿಸಿ ಅವು ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮದಡಿ ಬರುವಂತೆ ಮಾಡಿದ್ದುದು ಕೂಡ ಜಾಥಾದ ನೇರವಾದ ಫಲಿತಾಂಶವೇ. ಈ ಪ್ರಕ್ರಿಯೆಗೆ ಬಿಜಿವಿಜೆ ನಡೆಸಿದ ಅನೇಕ ಕಮ್ಮಟಗಳು ತರಬೇತಿ ಶಿಬಿರಗಳು ಸಭೆ ಸಮಾರಂಭಗಳು. ಅಷ್ಟೇ ಅಲ್ಲದೆ ಜಿಲ್ಲಾಧಿಕಾರಿಗಳಿಗಾಗಿ ಸಚಿವಾಲಯ ಆಶ್ರಯದಲ್ಲಿ ನಡೆಸಲಾದ ಪ್ರೇರಣಾ ಶಿಬಿರಗಳು ತುಂಬಾ ಸಹಾಯಕವಾದವು.

ಈಗ ಸುಮಾರು 70 ಜಿಲ್ಲೆಗಳು ಹೆಚ್ಚು ಕಡಿಮೆ ಈ ಎಲ್ಲವೂ ಭಾರತ ಜ್ಞಾನ ವಿಜ್ಞಾನ ಜಾಥಾ ನಡೆಸಲಾದ ಜಿಲ್ಲೆಗಳೇ-ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಆಸಂಭಿಸಿವೆ. ಈ ಎಲ್ಲಾ ಜಿಲ್ಲೆಗಳಲ್ಲಿ ಭಾರತ ಜ್ಞಾನ ವಿಜ್ಞಾನ ಜಾಥಾ ಸಂಚಾಲಕರು ಮತ್ತು ಸಾಕ್ಷರತಾ ರಾಯಭಾರಿಗಳೇ ಪ್ರಧಾನ ಚಾಲಕ ಶಕ್ತಿಗಳಾಗಿರುವುದು ಗಮನಾರ್ಹ. ಆದರೂ ಯಾವ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಉತ್ಸುಕತೆಯಿಂದ ಮುಂದೆ ಬಂದರೂ ಆ ಜಿಲ್ಲೆಗಳಲ್ಲಿ ಮಾತ್ರ ಬಿಜಿವಿಜೆ ಜಾಥಾ ಫಲ ಕೊಟ್ಟಿದೆ.

ಇಂದು ಸುಮಾರು 20 ಲಕ್ಷಕ್ಕೂ ಹೆಚ್ಚು ಸ್ವಯಂ ಸೇವಕರು ಸುಮಾರು 2ಕೋಟಿ ವಯಸ್ಕರಿಗೆ ಅಕ್ಷರ ಕಲಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇನ್ನು ಅನೇಕ ಜಿಲ್ಲೆ, ತಾಲ್ಲೂಕು ಮತ್ತು ಮಂಡಲ್‌ಗಳು ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮಗಳಿಗಾಗಿ ಸಿದ್ಧತೆಯನ್ನು ಮಾಡಿಕೊಳ್ಳುತ್ತಿವೆ. ಒಂದರ್ಥದಲ್ಲಿ ಸಾಕ್ಷರತಾ ಸರಪಳಿ ಕ್ರಿಯೆ ಆರಂಭವಾಗಿದೆ. ಅದು ಇನ್ನು ವೈವಿಧ್ಯಮಯವಾಗಿ, ವ್ಯಾಪಕವಾಗಿ ಬೆಳೆಯಬೇಕಾದದ್ದು ಮಾತ್ರ ಬಾಕಿ. ಈಗ ಉಕ್ಕೇರಿ ಬರುತ್ತಿರುವ ಉತ್ಸಾಹ ಅಳಿಯದಂತೆ ಎಚ್ಚರಿಕೆ ವಹಿಸುವ ಅವಶ್ಯಕತೆ ಇದೆ. ಇಂಥ ಪ್ರಯತ್ನದ ಮೂಲಕ ಇಡೀ ರಾಷ್ಟ್ರದಲ್ಲಿ ಸಾಕ್ಷರತಾ ಆಂದೋಲನ ನಡೆಸುವ ಸಾಧ್ಯತೆ ಈಗ ಒಂದು ಕನಸಾಗಿರದೆ ಕಾರ್ಯಸಾಧ್ಯವಾದ ಸಾಧುವಾದ ಒಂದು ವಾಸ್ತವಿಕ ಪ್ರಸ್ತಾವನೆಯಾಗಿದೆ.

ಈ ರೀತಿಯಾಗಿ ಭಾರತ ಜ್ಞಾನ ವಿಜ್ಞಾನ ಜಾಥಾ ತನ್ನ ಪ್ರಥಮ ಕಾರ್ಯ ಭಾರವನ್ನು ನಿರ್ವಹಿಸಿದೆ. ಅದು ಸಾಕ್ಷರತೆಯ ಪ್ರಶ್ನೆಯನ್ನು ಸಾಮಾಜಿಕ ಆದ್ಯತೆಗಳಲ್ಲಿ ಒಂದಾಗಿಸಿದೆ. ಸಾಕ್ಷರತೆಗಾಗಿ ಒಂದು ದುರ್ದಮ್ಯವಾದ ಬಯಕೆಯನ್ನು ಸೃಷ್ಟಿಸಿದೆ ಮಾತ್ರವಲ್ಲ, ಈ ಬೇಡಿಕೆಯ ಈಡೇರಿಕೆಗಾಗಿ ಅವಶ್ಯವಾಗಿರುವ ಒಂದು ಯಂತ್ರವನ್ನು ರಚಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ■

# ಕರ್ನಾಟಕದ ಭಾರತ ಜ್ಞಾನ ವಿಜ್ಞಾನ ಜಾಥ

ಕರ್ನಾಟಕದಲ್ಲಿ ಭಾರತ ಜ್ಞಾನ ವಿಜ್ಞಾನ ಜಾಥಾವನ್ನು ಸಂಘಟಿಸಲು ರಾಜ್ಯ ಮಟ್ಟದ ಸಮಿತಿಯೊಂದನ್ನು ಕರಾವಿಪ. ಸಮುದಾಯ. ಅನೇಕ ವಿದ್ಯಾರ್ಥಿ ಯುವಜನ ಸಂಘಟನೆಗಳು. ಮಹಿಳಾ ಸಂಘಟನೆಗಳು. ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು. ಸಮಾಜಸೇವಾ ಕಾರ್ಯಕರ್ತರು. ಶಿಕ್ಷಣ ತಜ್ಞರು. ರಾಜಕೀಯ ಮುಖಂಡರುಗಳು. ಇನ್ನೂ ಮುಂತಾದ ಜನ ವಿಭಾಗಗಳನ್ನು ಒಳಗೊಂಡ ವಿಶಾಲ ವ್ಯಾಪ್ತಿಯ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ವಿಧಾನಸಭಾ ಮಾಜಿ ಅಧ್ಯಕ್ಷರಾದ ಎಸ್.ಎಂ.ಕೃಷ್ಣರವರು ವಹಿಸಿಕೊಂಡು ಕಾರ್ಯನಿರ್ವಹಿಸಿದರು.

ಈ ಸಮಿತಿಯ ಮಾರ್ಗದರ್ಶನದಲ್ಲಿ ಜಾಥಾವನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಲಾಗಿತ್ತು. ಕರ್ನಾಟಕದ 10 ಜಿಲ್ಲೆಗಳಲ್ಲಿ ಜಾಥಾ ಪೂರ್ವ ಚಟುವಟಿಕೆಗಳನ್ನು ಪೂರ್ಣ ಕಾಲದ ಜಾಥಾವನ್ನು ಹಾಗೂ ಜಾಥೋತ್ತರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಲಾಗಿದೆ. ಇನ್ನೂ ಉಳಿದ ಐದು ಜಿಲ್ಲೆಗಳಲ್ಲಿ ಇವುಗಳ ಸ್ವರೂಪದಲ್ಲಿ ಅಲ್ಪಸ್ವಲ್ಪ ಕೊರತೆಗಳಾದರೂ ಜಾಥಾ ಸಾಕಷ್ಟು ಪರಿಣಾಮವನ್ನುಂಟು ಮಾಡುವಂತೆ ಮಾಡಲು ಸಾಧ್ಯವಾಯಿತು. ಇನ್ನೂ ಐದು ಜಿಲ್ಲೆಗಳಲ್ಲಿ ಈ ಜಾಥಾ ನಿರೀಕ್ಷಿಸಿದಷ್ಟು ಯಶಸ್ಸು ಪಡೆಯಲಿಲ್ಲ. ಈ ಜಾಥಾವನ್ನು ಸಂಘಟಿಸುವಾಗಲೇ ಮಂಡ್ಯ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದ ಯೋಜನೆಗಳು ರೂಪುಗೊಂಡಿದ್ದು ಒಂದು ಮಹತ್ವದ ಅಂಶ. ಇದಲ್ಲದೆ ಭಾರತ ಜ್ಞಾನ ಜಾಥಾಗಳು ಸಂಪೂರ್ಣ ಸಾಕ್ಷರತಾ ಆಂದೋಲನಗಳಿಗೆ ಪೂರಕವಾಗಿ ಕೆಲಸ ಮಾಡಿದವು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಾಕ್ಷರತಾ ರಾಯಭಾರಿಯೊಬ್ಬರ ಅವಿರತ ಶ್ರಮದ ಫಲವಾಗಿ ರಾಯಚೂರು ಅಲ್ಲದೆ ಶಿವಮೊಗ್ಗ. ಬೀದರ್ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ಜಾರಿಯಾಗಲು ಆ ಜಿಲ್ಲೆಗಳಲ್ಲಿ ಈ ಜಾಥಾ ಒಂದು ಮುಖ್ಯ ಕಾರಣವಾಗಿತ್ತು. ಇದರಿಂದಾಗಿ ಈ ಮೂರು ಜಿಲ್ಲೆಗಳ ಸಾಕ್ಷರತಾ ಆಂದೋಲನದಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಮುಖಂಡರುಗಳು ಕಾರ್ಯದರ್ಶಿ ಅಥವಾ ಸಹಕಾರ್ಯದರ್ಶಿಗಳಾಗಿ ಶ್ರಮಿಸುತ್ತಿದ್ದಾರೆ. ಇದಲ್ಲದೆ ಈ ಜಾಥಾ ನಂತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನಗಳನ್ನು ಕೈಗೆತ್ತಿಕೊಳ್ಳಲು ಅನೇಕ ಜಿಲ್ಲಾಧಿಕಾರಿಗಳು. ಸ್ವಯಂ ಸೇವಾ ಸಂಘಟನೆಗಳು ಮುಂದೆ ಬರುತ್ತಿರುವುದು ಈ ಜಾಥಾದ ಯಶಸ್ಸಿನ ಸೂಚನೆಯಾಗಿದೆ. ಈ ಜಾಥಾ ಸಂದರ್ಭದಲ್ಲೇ ಕೆಲವು ಜಿಲ್ಲೆಗಳಲ್ಲಿ ಕೇವಲ ಒಂದು ತಂಡವನ್ನು ರಚಿಸಲು ಯೋಜಿಸಲಾಗಿದ್ದರೂ ಕೆಲವೇ ಜಿಲ್ಲೆಗಳಲ್ಲಿ ಹಲವಾರು ತಂಡಗಳು ರೂಪುಗೊಂಡು ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ವ್ಯಾಪಕ ಪ್ರದರ್ಶನ

ನಡೆಸಿ ಜನ ಜಾಗೃತಿಯನ್ನು ಮೂಡಿಸಿವೆ. ಈ ಎಲ್ಲಾ ಜಿಲ್ಲೆಗಳಲ್ಲಿ ಅನೇಕ ನಿರ್ದೇಶಕರು ತಮ್ಮ ವಿನೂತನವಾದ ಸೃಜನಶೀಲತೆಯನ್ನು ಉಪಯೋಗಿಸಿಕೊಂಡು ಉತ್ತಮವಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸುಮಾರು 500ಕ್ಕೂ ಹೆಚ್ಚು ಕಲಾವಿದರು ಒಂದೂವರೆ ತಿಂಗಳ ಕಾಲ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ತಮ್ಮ ನಟನಾ ಪ್ರತಿಭೆಯ ಮೂಲಕ ಜನಜಾಗೃತಿ ಮೂಡಿಸಲು ಪ್ರಯತ್ನಿಸಿದ್ದಾರೆ. ಜಾಥಾ ನಡೆಸಲು ರಾಜ್ಯಮಟ್ಟದಲ್ಲಿ ಸಿದ್ಧತೆಗಳನ್ನು ನಡೆಸುವಾಗ ಸೂಕ್ತ ನಾಟಕ ಮತ್ತು ಹಾಡುಗಳ ಕೊರತೆ ಇತ್ತು. ಆದರೆ ಜಾಥಾದ ಮುಕ್ತಾಯದ ಹೊತ್ತಿಗೆ ಪ್ರತಿ ಜಿಲ್ಲೆಯಲ್ಲಿಯ ಅನೇಕ ಹೊಸ ರೀತಿಯ ನಾಟಕಗಳು. ಹಾಡುಗಳು ಮತ್ತು ರೂಪಕಗಳು ರಚಿತಗೊಂಡವು. ಅನೇಕ ಸಾಹಿತಿಗಳು ಈ ಕೊರತೆಯನ್ನು ನೀಗಿಸಲು ಪ್ರಯತ್ನಿಸಿದ್ದೇ ಅಲ್ಲದೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರಾರಂಭಿಸಿದಾಗ ಅಲ್ಲಿಯ ವಾತಾವರಣ ನಿರ್ಮಾಣಕ್ಕೆ ಅಗತ್ಯವಾದ ಸಾಹಿತ್ಯವನ್ನು ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ರೀತಿ ಪ್ರಚಾರಗೊಂಡ ಅನೇಕ ಹಾಡುಗಳು ಧ್ವನಿಸುರುಳಿಯಾಗಿ ಅಪಾರ ಜನಪ್ರಿಯತೆಯನ್ನು ಪಡೆದಿದೆ.

ಜಾಥಾದ ನಂತರ ಅದು ಉಂಟು ಮಾಡಿದ ಪರಿಣಾಮವನ್ನು ವಸ್ತು ನಿಷ್ಠವಾಗಿ ವಿಮರ್ಶಿಸಲು ಬೆಳಗಾವಿನಲ್ಲಿ ರಾಜ್ಯಮಟ್ಟದ ಸಮಾವೇಶವೊಂದನ್ನು ನಡೆಸಿ ಅಂತಿಮ ವರದಿಯೊಂದನ್ನು ಸಿದ್ಧಪಡಿಸಲಾಯಿತು. ಜಾಥಾದ ಮೂಲಕ ಸಂಘಟಿತರಾದ ವಿವಿಧ ಜನವಿಭಾಗಗಳು ಸಾಕ್ಷರತೆಗಾಗಿ ತಮ್ಮ ಪ್ರಯತ್ನವನ್ನು ಮುಂದುವರಿಸುವಂತೆ ಮಾಡಲು ಒಂದು ದಿನದ ಸಂಘಟನಾ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಿ. ಪ್ರಖ್ಯಾತ ವಿಜ್ಞಾನಿ ಡಾ. ಸಿ.ಎನ್.ಆರ್.ರಾವ್‌ರವರ ಅಧ್ಯಕ್ಷತೆಯಲ್ಲಿ ಒಂದು ಹೊಸ ರಾಜ್ಯ ಸಮಿತಿಯನ್ನು ಸಂಘಟಿಸಲಾಗಿದೆ. ಆ ಸಮಿತಿಯ ಪೂರ್ಣ ವಿವರಗಳನ್ನು ಈ ಹೊತ್ತಿಗೆಯ ಕೊನೆಯ ಭಾಗದಲ್ಲಿ ಕೊಡಲಾಗಿದೆ. ಈ ಹೊಸ ಸಮಿತಿಯು ಅಸ್ತಿತ್ವಕ್ಕೆ ಬಂದಾಗಿನಿಂದ ಸಮಿತಿಯ ಚಟುವಟಿಕೆಗಳು ಮತ್ತಷ್ಟು ಹುರುಪಿನಿಂದ ನಡೆಯುವಂತಾಗಿದೆ.

ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಸಕ್ರಿಯ ಕಾರ್ಯಕರ್ತರುಗಳನ್ನು ಆಹ್ವಾನಿಸಿ ಅವರಿಗೆ ಸಂಪೂರ್ಣ ಸಾಕ್ಷರತಾ ಆಂದೋಲನದ ವಿವಿಧ ಮುಖಗಳನ್ನು ಎರಡು ದಿನಗಳ ಕಾಲ ನಡೆದ ಸವಿವಾಸ ಶಿಬಿರದಲ್ಲಿ ಯಶಸ್ವಿಯಾಗಿ ಪರಿಚಯಿಸಲಾಯಿತು. ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ ಪರಿಣತರು ತಮ್ಮ ಅನುಭವಗಳನ್ನು ನಿರೂಪಿಸಿ ಕಾರ್ಯಕರ್ತರಿಗೆ ಸ್ಫೂರ್ತಿಯನ್ನು ತುಂಬಿದ್ದಾರೆ. ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಪಾಲ್ಗೊಳ್ಳುವ ಕಾರ್ಯಕರ್ತರಿಗೆ ಸಹಾಯಕವಾಗಿ ರಾಷ್ಟ್ರ ಸಮಿತಿ ಸಿದ್ಧಪಡಿಸಿರುವ ಕೈಪಿಡಿಯೊಂದನ್ನು ಕನ್ನಡದಲ್ಲಿ ಮುದ್ರಿಸಿ ಕರ್ನಾಟಕದಾದ್ಯಂತ ಅಗತ್ಯವಾದ ಶೈಕ್ಷಣಿಕ

ಸಂಪನ್ಮೂಲವನ್ನೊದಗಿಸಲು ರಾಜ್ಯಮಟ್ಟದ ಪರಿಣಿತ ಸಂಪನ್ಮೂಲ ವ್ಯಕ್ತಿಗಳ ಶಿಬಿರವೊಂದನ್ನು ಐದು ದಿವಸಗಳ ಕಾಲ ಯಶಸ್ವಿಯಾಗಿ ನಡೆಸಲ್ಪಟ್ಟಿವೆ. ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಬಳಸಬಹುದಾದ ತರಬೇತಿ ವಿಧಾನ ಮತ್ತು ಸ್ವರೂಪ. ಪಠ್ಯಪುಸ್ತಕ. ಪಠ್ಯಪುಸ್ತಕದಲ್ಲಿನ ವಿಷಯ. ಕಲಿಸುವ ವಿಧಾನ. ಇನ್ನೂ ಮುಂತಾದ ಅನೇಕ ವಿಷಯಗಳ ಬಗ್ಗೆ ಪರಿಣಿತಿಯನ್ನು ಪಡೆದುಕೊಂಡಿರುತ್ತಾರೆ. ಈ ಶಿಬಿರದ ಮೂಲಕ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ನಡೆಯುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಲನಗಳ ಅನುಭವಗಳನ್ನು ಕ್ರೋಢೀಕರಿಸಲು ಸಹ ಸಾಧ್ಯವಾಗಿದೆ. ಭಾರತ ಜ್ಞಾನ ವಿಜ್ಞಾನ ಸಮಿತಿಯು ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತೆಗೆ ಅಗತ್ಯವಾದ ಪರಿಣಿತರ ಮಾನವ ಸಂಪನ್ಮೂಲಗಳನ್ನು ಸಿದ್ಧಪಡಿಸಲು ಈಗ ಸಂಘಟನೆ ಮತ್ತು ತರಬೇತಿಗಳನ್ನು ನಡೆಸುತ್ತಿದೆ. ಇದಲ್ಲದೆ ವೈಜ್ಞಾನಿಕ ಮನೋಭಾವ. ರಾಷ್ಟ್ರೀಯ ಭಾವೈಕ್ಯತೆ. ಕೋಮು ಸೌಹಾರ್ದತೆ. ಮಹಿಳಾ ಸಮಾನತೆ ಮುಂತಾದ ವಿಷಯಗಳ ಪರವಾಗಿ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧವಾಗಿ ಜನಾಭಿಪ್ರಾಯ ರೂಪಿಸುವ ತನ್ನ ಪ್ರಯತ್ನಗಳನ್ನು ನಡೆಸುತ್ತಿದೆ. 'ರಾಷ್ಟ್ರೀಯ ಐಕ್ಯತೆ ಮತ್ತು ಪ್ರಗತಿ' ಘೋಷಣೆಯಡಿಯಲ್ಲಿ "ಹಮಾರ ದೇಶ್-ನಮ್ಮ ನಾಡು" ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಯಶಸ್ವಿಗೊಳಿಸಲು ಬಿಜಿವಿಎಸ್ ಪ್ರಯತ್ನಿಸುತ್ತಿದೆ. ಬಾಲೋತ್ಸವ. ಲೋಕ ಸಂಪರ್ಕ ಆಂದೋಲನ. ಸೈಕಲ್ ಜಾಥ. ಜನ ಸಂಸತ್ ಮುಂತಾದ ಕಾರ್ಯಕ್ರಮಗಳ ಮೂಲಕ ನಮ್ಮ ಸಮಾಜ. ನಮ್ಮ ಜೀವನ. ನಮ್ಮ ಸ್ವಾತಂತ್ರ್ಯಗಳ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವುಂಟು ಮಾಡಲು ಪ್ರಯತ್ನಿಸುತ್ತಿದೆ. 'ಸಮತಾ' ಕಾರ್ಯಕ್ರಮದ ಮೂಲಕ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಲು. ಮಹಿಳಾ ಸಾಕ್ಷರತೆಗೆ ಬೇಕಾದ ಬೆಂಬಲ. ಪ್ರೋತ್ಸಾಹ ನೀಡಲು ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳಾ ಸಮಾನತೆಗೆ ಕಾರ್ಯ ನಿರ್ವಹಿಸಲು ಪ್ರಯತ್ನಿಸುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಜನಪ್ರಿಯಗೊಳಿಸುವುದು. ವೈಜ್ಞಾನಿಕ ಮನೋಭಾವಗಳನ್ನು ಬೆಳೆಸುವುದು. ಪರಿಸರ ಆರೋಗ್ಯ ನೈರ್ಮಲ್ಯಗಳ ಬಗ್ಗೆ ಪ್ರಜ್ಞೆ ಮೂಡಿಸಲು ಹಲವಾರು ಕಾರ್ಯಗಳನ್ನು ನಡೆಸಲು ಪ್ರಯತ್ನಿಸುತ್ತಿದೆ. ದಿನೇ ದಿನೇ ಈ ಮೇಲೆ ಕಾಣಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹೊಸ ಹೊಸ ಜನರು ಭಾರತ ಜ್ಞಾನ ವಿಜ್ಞಾನ ಸಮಿತಿಯೊಂದಿಗೆ ಸಹಕರಿಸಿ ಕೆಲಸ ಮಾಡುತ್ತಿರುವುದು ಅದರ ಬಹುಮುಖ್ಯ ಸಾಧನೆಯಾಗಿದೆ. ವಿದ್ಯಾರ್ಥಿಗಳು. ಯುವಜನರು. ರೈತರು. ಕಾರ್ಮಿಕರು. ರಾಜಕೀಯ ಮುಖಂಡರು. ವಿಜ್ಞಾನಿಗಳು. ಸಾಹಿತಿಗಳು. ಕಲಾವಿದರು. ಸಮಾಜಸೇವಾ ಕಾರ್ಯಕರ್ತರು. ಶಿಕ್ಷಣ ಸಂಸ್ಥೆಗಳ ಮುಖಂಡರು ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ದುಡಿಯುತ್ತಿರುವುದು ಮತ್ತು ದುಡಿಯಲು ಮುಂದೆ ಬರುತ್ತಿರುವುದು ನಮ್ಮ ರಾಜ್ಯದಲ್ಲಿ ಈ ಜಾಥಾದ ಮಹತ್ವದ ಸಾಧನೆಯಾಗಿದೆ. ■

# ಜಾಥಾ ಆದ ಒಂದು ವರ್ಷದ ನಂತರ

ಸಂಪೂರ್ಣ ಸಾಕ್ಷರತಾ ಆಂದೋಲನದ ಆರಂಭ.

ಜಾಥಾ ನಂತರದ ಒಂದು ವರ್ಷದ ಕಾಲಾವಧಿಯಲ್ಲಿ ಅನೇಕ ಪ್ರಮುಖ ಬದಲಾವಣೆಗಳು ಸಾಕ್ಷರತಾ ಆಂದೋಲನದಲ್ಲಿ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿಯಲ್ಲಿ ಆದವು.

ಸಂಪೂರ್ಣ ಸಾಕ್ಷರತಾ ಆಂದೋಲನವು ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೆರಿಯಿಂದ ಇನ್ನುಳಿದ ಸ್ಥಳಗಳಿಗೂ ಹರಡಿತು. ದಕ್ಷಿಣ ಕನ್ನಡ ಮತ್ತು ಬಿಜಾಪುರದಲ್ಲಿಯೂ ಆಂದೋಲನಗಳು ಪ್ರಾರಂಭವಾದವು. ಅಧಿಕಾರಿಗಳಿಂದ, ಸಂಘ-ಸಂಸ್ಥೆಗಳಿಂದ ಮತ್ತು ಜನರಿಂದ ಬಂದ ಅದ್ಭುತ ಪ್ರೋತ್ಸಾಹದಿಂದಾಗಿ ಸಾಮಾಜಿಕ ಆಂದೋಲನವಾಗಿ ಬೆಳೆಯಿತು. ಜಾಥಾ ಕಾಲದಲ್ಲಿಯೇ ಸಾಕ್ಷರತಾ ಆಂದೋಲನ ಯೋಜನೆಗಳು ಆಂಧ್ರಪ್ರದೇಶದ ಚಿತ್ತೂರು, ನೆಲ್ಲೂರು, ಕಡಪ, ಕರ್ನೂಲ್ ಮತ್ತು ಹೈದರಾಬಾದ್‌ಗಳಲ್ಲಿ, ಒರಿಸ್ಸಾದ ಸುಂದರ್‌ಗಡ್, ಬಿಹಾರದ ಮುಜಾಫರ್ ಮತ್ತು ಜೆಮ್‌ಶೆಡ್‌ಪುರ್ (ಪಟ್ಟಣ ಮಾತ್ರ) ಮತ್ತು ಮಧ್ಯಪ್ರದೇಶದ ದುರ್ಗದಲ್ಲಿ ಆಗಿದ್ದವು. ಈ ಯೋಜನೆಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕಾರ್ಯಕರ್ತರೇ ಇದ್ದರು. ಆದರೆ ಅವರಿಗೆ ಮೊದಲೇ ತರಬೇತಿ ಆಗಿರಲಿಲ್ಲ ಹಾಗೂ ಅವರಿಗೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಸಂಘಟಿಸಲು ತಿಳಿದಿರಲಿಲ್ಲ.

1991ರ ಫೆಬ್ರುವರಿಯಲ್ಲಿ ರಾಜ್ಯ ಪ್ರತಿನಿಧಿಗಳ ಮೂಲಕ, ಆಸಕ್ತಿ ಇರುವವರನ್ನು ಆರಿಸಿ ಎರ್ನಾಕುಲಂನಲ್ಲಿ ಹತ್ತು ದಿನಗಳ ಶಿಬಿರವನ್ನು ಏರ್ಪಡಿಸಲಾಯಿತು. ಹೀಗೆ ಶಿಬಿರದಿಂದ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿಯೊಂದಿಗಿನ ಚಟುವಟಿಕೆಗಳಿಂದ ಅನೇಕ ಹೊಸ ಸನ್ನಿವೇಶಗಳು ಮೂಡಿದವು.



1. ಯಾವ ಜಿಲ್ಲೆಯಲ್ಲಿ ಬಿಜವಿಜೆಯ ಪರಿಣಾಮ ಆಗಿದೆ, ಎಲ್ಲಿ ಸ್ವಯಂಚಾಲನೆ ಮೂಡಿದೆ, ಎಲ್ಲಿ ರಾಜ್ಯ ಆಡಳಿತ ಆಸಕ್ತಿ ತೋರಿದೆ, ಅಂತಹ ಕಡೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಜಿಲ್ಲಾಧಿಕಾರಿಗಳ ಸಹಾಯದಿಂದ ಪ್ರಾರಂಭಿಸಿ ಅನುಷ್ಠಾನಗೊಳಿಸಲಾಯಿತು.

ಆ ಜಿಲ್ಲೆಗಳು ಆಂಧ್ರಪ್ರದೇಶದ ಕಮ್ಮಮ್, ಹರಿಯಾಣದ ಪಾಣಿಪತ್, ಮಹಾರಾಷ್ಟ್ರದ ಪುಣೆ, ಬಿಹಾರದ ಮಾದೇಪುರ, ತಮಿಳುನಾಡಿನ ಕಾಮರಾಜನಗರ ಮತ್ತು ಪುದಿಕೊಟ್ಟೈ, ಮಧ್ಯಪ್ರದೇಶದ ರಾಯಪುರ, ಬಿಲಾಸ್‌ಪುರ್ ಮತ್ತು ರತಲಮ್.

2. ಯಾವ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಕ್ರಿಯಾತ್ಮಕವಾಗಿದ್ದರು ಅಂತಹ ಜಿಲ್ಲೆಗಳಲ್ಲಿ ಭಾರತ ಜ್ಞಾನ-ವಿಜ್ಞಾನ ಸಮಿತಿಯು ತನ್ನ ಸಂಪೂರ್ಣ ಸಹಯೋಗವನ್ನು ಆಂದೋಲನವನ್ನು ಯಶಸ್ವಿಗೊಳಿಸಲು ನೀಡಿತು. ತಮಿಳುನಾಡಿನ ಪುಸುಂಪನ್, ಒರಿಸ್ಸಾದ ಕಿಯೋಂಜಾರ್, ಹಿಮಾಚಲ ಪ್ರದೇಶದ ಸಿರ್‌ಮರ್ ಮತ್ತು ಕರ್ನಾಟಕದ ತುಮಕೂರು ಆ ಜಿಲ್ಲೆಗಳು.

3. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ತಾವೇ ಸ್ವತಃ ಸಾಕ್ಷರತಾ ಆಂದೋಲನಗಳನ್ನು ಪ್ರಾರಂಭಿಸಿದ್ದರು. ಭಾರತ ಜ್ಞಾನ ವಿಜ್ಞಾನ ಜಾಥ ಅನೇಕ ಕಡೆಗಳಲ್ಲಿ ಯೋಜನೆಯೊಂದಿಗೆ ಭಾಗಿಯಾಯಿತು. ಅಲ್ಲಿನ ಯೋಜನೆಗಳು ಮತ್ತು ಕಾರ್ಯಕರ್ತರು ಭಾರತ ಜ್ಞಾನ ವಿಜ್ಞಾನ ಸಮಿತಿಯ ಪಾತ್ರವನ್ನು ಪ್ರತಿನಿಧಿಸಿದರು.

4. ಉಳಿದ ಅನೇಕ ಜಿಲ್ಲೆಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯು ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ. ಭಾರತ ಜ್ಞಾನ ವಿಜ್ಞಾನ ಸಮಿತಿಯು ಅಲ್ಲಿಯೂ ಸಾಕ್ಷರತಾ ಆಂದೋಲನವನ್ನು ಪ್ರಾರಂಭಿಸಲು ಆದರ ಕಾರ್ಯಕರ್ತರು ತಳಹದಿಯನ್ನು ಸಿದ್ಧಪಡಿಸುತ್ತಿದ್ದಾರೆ.

## ಸಂಪೂರ್ಣ ಸಾಕ್ಷರತಾ ಆಂದೋಲನ ಏನನ್ನು ಸಾಧಿಸಿದೆ?

ಸಂಪೂರ್ಣ ಸಾಕ್ಷರತಾ ಆಂದೋಲನದ ಸಾಧನೆಗಳನ್ನು ಈಗಲೇ ಹೇಳುವುದು ತೀರ ಬೇಗವಾಯಿತೆಂದರೂ ರಾಷ್ಟ್ರವ್ಯಾಪಿ ಆಂದೋಲನದ ಕೆಲವು ಸಾಧನೆಗಳು ಹೀಗಿವೆ:

1. ಹಾಡುಗಳು, ಸಭೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಜಾಗೃತಿ ಮತ್ತು ವೈಯಕ್ತಿಕ ಸಂಪರ್ಕ. ಈ ಆಂದೋಲನ ಎಲ್ಲಾ ಜನ ಸಮೂಹಗಳನ್ನು ಮುಟ್ಟಿ ಅವರ ಶೋಷಣೆಯನ್ನು ಅರಿವಿಗೆ ತಂದು ಅವರನ್ನು ಸಾಕ್ಷರತಾ ಆಂದೋಲನದ ಕಡೆ ಸೆಳೆದು ಸಾಕ್ಷರತೆಗೆ ಸೇರಿಸುತ್ತಿದೆ. ಸಮಾಜದ ದುರ್ಬಲ ವರ್ಗ, ಗಿರಿಜನ, ಹರಿಜನ ಹಾಗೂ ಮಹಿಳೆಯರಿಗೂ ಈ ಕಾರ್ಯಕ್ರಮವು ತಲುಪಿದೆ.

2. ಸಮಾಜ ಸೇವಕರಿಗೆ, ಸ್ವಯಂ ಸೇವಕರಿಗೆ ಈ ಯೋಜನೆಯ ಮಹತ್ವವನ್ನು ತಿಳಿಸಿ ಅವರಿಗೆ ಇದೊಂದು ಸಾಮಾಜಿಕ ಕರ್ತವ್ಯವೆಂದು ತಿಳಿಸಿ ಅವರನ್ನು ಈ ಯೋಜನೆಯಲ್ಲಿ ಪಾಲ್ಗೊಳಿಸುವುದು ಜಿಲ್ಲಾ ಸಾಕ್ಷರ ಸಮಿತಿಯನ್ನು ರಚಿಸಿ, ಈ ಬೃಹತ್ ಯೋಜನೆ ಯಶಸ್ವಿಗೊಳಿಸಲು ಸಹಾಯ ಮಾಡುವುದು.

3. ಸಾಕ್ಷರತಾ ಆಂದೋಲನವನ್ನು ಲಕ್ಷಗಟ್ಟಲೆ ಅಕ್ಷರಸ್ಥರನ್ನು ಬಳಸಿ

ಫಲಕಾರಿಯಾಗುವಂತೆ ಮಾಡುವುದು. ಶೇಕಡಾ 50 ರಿಂದ 70 ರಷ್ಟು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಐದು ಲಕ್ಷ ಜನಸಂಖ್ಯೆಯ ಜಿಲ್ಲೆಯಲ್ಲಿ ಶೇಕಡ 50 ಎಂದರೆ 2.5 ಲಕ್ಷ ಜನ- ದಾಷರರಾಗಿರುವುದು ಒಂದು ಅದ್ಭುತ ಕಾರ್ಯ.

ಒಬ್ಬ ನವಸಾಕ್ಷರನನ್ನು ರೂಪಿಸುವಲ್ಲಿ ಬಳಸುವ ಹಣದ ಖರ್ಚು ಅತ್ಯಲ್ಪ ಮತ್ತು ಸಮಯವೂ ಸ್ವಲ್ಪ.

ಸಂಪೂರ್ಣ ಸಾಕ್ಷರತಾ ಆಂದೋಲನದ ಶೇ. 100ರಷ್ಟು ಕಾರ್ಯಕ್ರಮ ಸಮಾಜದ ದುರ್ಬಲ ವರ್ಗಕ್ಕೆ ಮುಟ್ಟಬೇಕು.

4. ಸಾವಿರಾರು ಹಳ್ಳಿಗಳಲ್ಲಿ ಸಮಿತಿಗಳನ್ನು ರಚಿಸಿ ಆ ಮೂಲಕ ಕಾರ್ಯಕ್ರಮದಲ್ಲಿ ಚುರುಕು ಮತ್ತು ಕಾರ್ಯಕ್ರಮವನ್ನು ಬಲಗೊಳಿಸುವ ಕೆಲಸ ನಡೆದಿದೆ.

5. ಸಾಕ್ಷರತಾ ಆಂದೋಲನ ಮುಗಿದ ನಂತರ ಅಲ್ಲಿನ ಜನರಿಗೆ ಅನೇಕ ಜನರ ಸಂಪರ್ಕ ದೊರೆಯುತ್ತದೆ. ಸಮಾಜದ ವಿಸ್ತಾರವಾದ ಬುದ್ಧಿವಂತ ಸಮೂಹ ಈ ಯೋಜನೆಯಲ್ಲಿ ತರಬೇತುದಾರರಾಗಿ ಪಾಲ್ಗೊಳ್ಳುತ್ತಿದ್ದಾರೆ.

ಎಲ್ಲಾ ಯೋಜನೆಗಳು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಆದರೆ ನಿಸ್ಸಂಶಯವಾಗಿ ಜನರ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗುತ್ತವೆ.



# ಭಾರತ ಜ್ಞಾನ ವಿಜ್ಞಾನ ಸಮಿತಿಯ ನಕ್ಷೆ

ಜಾಥಾದ ನಂತರ ಭಾರತ ಜ್ಞಾನ ವಿಜ್ಞಾನ ಸಮಿತಿಯ ಪಾತ್ರವನ್ನು ಈ ರೀತಿ ಹೇಳಬಹುದು.

1. ಮೊದಲಿನಿಂದಲೂ ಜನರ ಬೆಂಬಲವನ್ನು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಒದಗಿಸಿಕೊಡುವುದು.

2. ಯೋಜನೆಯ ಎಲ್ಲಾ ಹಂತಗಳಲ್ಲೂ ಸಹಕರಿಸುವುದು-ಜನರನ್ನು, ಪರಿಸರವನ್ನು ಯೋಜನೆಯ ಸಹಾಯಕ್ಕೆ ತಿರುಗಿಸುವುದು-ತರಬೇತಿ ನೀಡುವುದು. ಜನರ ಬೆಂಬಲವನ್ನು ಬಲಗೊಳಿಸಿ ಕಾಯ್ದಿರಿಸುವುದು.

3. ಸತತವಾಗಿ ಅಧಿಕಾರಿಗಳ, ರಾಜಕಾರಣಿಗಳ, ಸ್ವಯಂ ಸೇವಾ ಸಂಘಗಳ, ಕಾರ್ಮಿಕ ಸಂಘಗಳ, ಬುದ್ಧಿಜೀವಿಗಳ ಸಂಪರ್ಕವಿಟ್ಟುಕೊಂಡು ಸಾಕ್ಷರತಾ ಆಂದೋಲನಕ್ಕೆ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡುವುದು.

4. ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕೇಂದ್ರಗಳನ್ನು ತೆರೆದು ಸಾಕ್ಷರತಾ ಆಂದೋಲನವನ್ನು ಸ್ಥಿರಗೊಳಿಸುವುದು. ಇದರಿಂದ ಸಾಕ್ಷರತಾ ಕಾರ್ಯಕ್ರಮದ ನಂತರವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಆರೋಗ್ಯ, ಸಾಂಸ್ಕೃತಿಕ ಜಾಗೃತಿ ಮುಂದುವರಿಸಲು ಸಹಾಯ ಮಾಡಲಾಗುವುದು. ಸಂಘಟನೆಗಳನ್ನು ರಚಿಸುವುದು ಮತ್ತು ಜನರೊಂದಿಗೆ ವಿಶ್ವಾಸದಿಂದ ಸಂಪರ್ಕ ಹೊಂದಿರುವುದು ಪ್ರಜಾಪ್ರಭುತ್ವದಲ್ಲಿ ಜನರನ್ನು ಅಭಿವೃದ್ಧಿಯ ಕಡೆಗೆ ಸೆಳೆದೊಯ್ಯಲು ಸಹಾಯಕವಾಗುವುದು.

■











# ಸಾಕ್ಷರತೆಯ ನಂತರ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕನಸು

1987, 1990 ಮತ್ತು ಸಂಪೂರ್ಣ ಸಾಕ್ಷರತಾ ಆಂದೋಲನಗಳ ಸಂಶೋಧನೆಗಳು ಹೊಸ ಸಂಭಾವ್ಯತೆಗಳನ್ನು ಸೃಷ್ಟಿಸಿವೆ. ಅಭೇದ್ಯ ಶತ್ರುವಾದ ಅನಕ್ಷರತೆ ಈಗ ಬಹು ಸ್ಪಷ್ಟವಾಗಿ ತೋರುತ್ತಿದೆ. ದೇಶ. ಭಾಷೆ. ಜಾತೀಯ. ಪ್ರಾಂತ್ಯದ ಇನ್ನೂ ಅನೇಕ ಉರಿಯುತ್ತಿರುವ ಸಮಸ್ಯೆಗಳನ್ನು. ಹಸಿವು. ಭ್ರಷ್ಟತೆ ಮತ್ತು ಸಂಕುಚಿತ ಮನೋಭಾವದಿಂದ ಬಳಲುತ್ತಿರುವಾಗ ಅವುಗಳನ್ನು ಹೋಗಲಾಡಿಸಲು ಲಕ್ಷಾಂತರ ಜನ ಯುವಕ ಯುವತಿಯರನ್ನು ಈ ಆಂದೋಲನದಲ್ಲಿ ಒಗ್ಗೂಡಿಸಿ ಹೋರಾಡಲು ಅಣಿ ಮಾಡುತ್ತಿದೆ.

ಇಂತಹ ಮಾರ್ಗವನ್ನು ಬೇರೆ ಕ್ಷೇತ್ರಗಳಲ್ಲಿ ಅಳವಡಿಸಲು ಸಾಧ್ಯವೇ?

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ. ಸ್ತ್ರೀ ಸ್ವಾತಂತ್ರ್ಯ. ಆರೋಗ್ಯ. ಪರಿಸರ ರಕ್ಷಣೆ. ಇಲ್ಲಿ ಸಾಧ್ಯವಿಲ್ಲ. ಈ ಯೋಜನೆಗಳು ತಯಾರಿದ್ದರೂ ಸಾಕ್ಷರತಾ ಆಂದೋಲನಕ್ಕೆ ಮೇಲಿನ ಯೋಜನೆಗಳಿಗೂ ಕೆಲವು ವ್ಯತ್ಯಾಸ ಹಾಗೂ ಕೆಲವು ಸಾಮ್ಯಗಳನ್ನು ನೋಡಬಹುದು.

1. ಸಂಪೂರ್ಣ ಸಮಾಜದ ಶಕ್ತಿಯನ್ನು ಒಂದು ಸಾರ್ವತ್ರಿಕ ಗುರಿಯ ಕಡೆಗೆ ತಿರುಗಿಸುವುದು.

2. ಬಲವಾದ ಪ್ರೇರಣೆಯಿಂದ ಆಂದೋಲನವನ್ನು ಸಾಗಿಸುವುದು.
3. ಸಂಪೂರ್ಣ ವ್ಯಾಪ್ತಿಯ ಯೋಜನೆ.
4. ಸ್ವಯಂಪೂರ್ಣ ಶ್ರಮದಾನ.
5. ಎಚ್ಚರಿಕೆಯಿಂದ ರೂಪಿಸಿದ ಸೂತ್ರ.
6. ಸಮಾಜದಿಂದ ಬೇಕಾದ ವಸ್ತುಗಳ ಕೊಡುಗೆ
7. ದೇಶಭಕ್ತಿಯ ಪ್ರಜ್ಞೆ
8. ಸಮಾಜದ ಎಲ್ಲಾ ವರ್ಗಗಳಿಂದ ಪಾಲ್ಗೊಳ್ಳುವ ಉತ್ಸಾಹ.

ಮುಂದಿನ ವರ್ಷದಲ್ಲಿ ಇನ್ನೂ ಅರವತ್ತು ಜಿಲ್ಲೆಗಳನ್ನು ಸಂಪೂರ್ಣ ಸಾಕ್ಷರ ಜಿಲ್ಲೆಗಳನ್ನಾಗಿ ಮಾಡಲಾಗುವುದು. ಉತ್ಸಾಹದಿಂದಿರುವ ಸ್ವಯಂ ಸೇವಕರು. ಹೊಸ ಅರಿವು ಮತ್ತು ಹಳ್ಳಿಗಳಿಂದ ಪಾಲ್ಗೊಳ್ಳಲು ತೋರುತ್ತಿರುವ ಯುವಕರ ಉತ್ಸಾಹ. ಇವು ಯೋಜನೆಯನ್ನು ಯಶಸ್ವಿಗೊಳಿಸಲು ಸಹಾಯವಾಗುವವು.

## ಕೈಗೆತ್ತಿಕೊಳ್ಳಲಾಗುವ ಕೆಲವು ನಿಖರವಾದ ಆಂದೋಲನಗಳು

**I ಸಾಕ್ಷರತೆ ನಂತರದ ಆಂದೋಲನ**

1. ಕಲಿತಿರುವುದನ್ನು ಜ್ಞಾಪಿಸಿಕೊಳ್ಳಲು ಮತ್ತು ಭದ್ರವಾಗಿ ಉಳಿಯಲು ಸಹಾಯ ಮಾಡುವುದು.
2. ಸ್ವಯಂ ಕಲಿಕೆಯನ್ನು ಪ್ರೋತ್ಸಾಹಿಸುವುದು.
3. ಕಲಿತಿರುವುದನ್ನು ನಿಜ ಜೀವನದಲ್ಲಿ ಅಳವಡಿಸುವುದಕ್ಕೆ ಪ್ರೋತ್ಸಾಹಿಸುವುದು.
4. ಅರಿವಿನ. ಜ್ಞಾನದ ಅನೇಕ ಮುಖಗಳನ್ನು ಪರಿಚಯಿಸುವುದು.
5. ಸಾಕ್ಷರತೆ ಮತ್ತು ಅನೇಕ ಅಭಿವೃದ್ಧಿ ಕಾರ್ಯಗಳ ನಡುವೆ ಸಂಬಂಧವೇರ್ಪಡಿಸುವುದು.

**II ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದು.**

1. ಕಲಿತಿರುವುದನ್ನು ಮರೆಯದಂತೆ ಮತ್ತು ಹೊಸದಾಗಿ ಕಲಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪುನರ್‌ತರಬೇತಿ.
2. ಪ್ರತಿಯೊಂದು ಮಗುವಿಗೂ ಪೂರ್ಣ ವಿದ್ಯಾಭ್ಯಾಸದ ಕಡೆಗೆ ಒತ್ತು ನೀಡುವುದು.
3. ಸಾರ್ವತ್ರಿಕವಾಗಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವುದು. ಶೇಕಡಾ 100ರ ಹಾಜರಾತಿಯನ್ನು ಕಾಪಾಡುವುದು.
4. ಉಳಿದ ಮಕ್ಕಳಿಗೆ ಶಾಲೆಗಳಲ್ಲಿ ಮತ್ತೆ ಪುನರ್ ತರಬೇತಿಯ ಯೋಜನೆ.



RB11.2
05193
COMMUNITY HEALTH CELL LIBRARY AND DOCUMENTATION UNIT

5. ಜನ ಇದರಲ್ಲಿ ಪಾಲ್ಗೊಂಡು, ಜವಾಬ್ದಾರಿ ವಹಿಸಿ, ಪ್ರಾಥಮಿಕ ಶಿಕ್ಷಣ ಯೋಜನೆ, ಸಂಪೂರ್ಣ ಯಶಸ್ವಿಯಾಗುವಂತೆ ಪ್ರಯತ್ನ ಮಾಡುವುದು.

**III ಜ್ಞಾನ ಸಂಪಾದನೆಗೆ ಓದು ಮತ್ತು ಸಾಂಸ್ಕೃತಿಕ ಪರಿಚಯ**

1. ಓದುವ ಹವ್ಯಾಸವನ್ನು ಬೆಳೆಸುವುದು ಮತ್ತು ಸುಶಿಕ್ಷಿತ ಸಮಾಜವನ್ನು ನಿರ್ಮಿಸಲು ಹೋರಾಡುವುದು.
2. ಜನರ ಸಹಾಯದಿಂದ ಹೆಚ್ಚು ಗ್ರಂಥಾಲಯಗಳನ್ನು ತೆರೆಯುವುದು.
3. ಗ್ರಂಥಾಲಯಗಳನ್ನು ಜ್ಞಾನ ಮತ್ತು ಸಂಸ್ಕೃತಿಯ ಕೇಂದ್ರಗಳನ್ನಾಗಿ ಮಾಡುವುದು.
4. ಸಾಂಸ್ಕೃತಿಕ ಪ್ರತಿಭೆಯನ್ನು ಪ್ರೋತ್ಸಾಹಿಸುವುದು, ಬೆಳೆಸುವುದು ಮತ್ತು ಪರಿಚಯಿಸುವುದು. ಇದರಿಂದ ಸಾಂಸ್ಕೃತಿಕ ಇಬ್ಭಾಗ ಮಾಡಲು ಇಚ್ಛಿಸುವ ಶಕ್ತಿಗಳನ್ನು ಎದುರಿಸುವುದು.

**IV ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಸಾಕ್ಷರತೆ**

1. ಆಂದೋಲನದಲ್ಲಿ ಭಾಗವಹಿಸಿದ ಮಹಿಳಾ ವರ್ಗವನ್ನು ಬಲಪಡಿಸಿ ಅವರ ಸಂಖ್ಯೆಯನ್ನು ವೃದ್ಧಿಸುವುದು.
2. ಮುಂದೆ ಬರುವ ಕಲಿತ ಮಹಿಳೆಯರಿಂದ ಸಮಾಜದ ಪಿಡುಗಿನ ವಿರುದ್ಧ ಹೋರಾಡುವಂತೆ ಪ್ರೋತ್ಸಾಹಿಸುವುದು.
3. ಮಹಿಳೆಯರ ಹಕ್ಕುಗಳ ಮತ್ತು ಸ್ವಾತಂತ್ರ್ಯದ ಬಗ್ಗೆ ತಿಳುವಳಿಕೆ
4. ಮಹಿಳೆಯರನ್ನು ಸಂಘಟಿಸಿ ಅವರನ್ನು ತಮ್ಮ ಹಕ್ಕುಗಳಿಗೆ ಹೋರಾಡಲು ತರಬೇತಿ ನೀಡುವುದು ಮತ್ತು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು.

**V ಆರೋಗ್ಯಕ್ಕಾಗಿ ಸಾಕ್ಷರತೆ**

1. ಅನೇಕ ಆರೋಗ್ಯ ವಿಷಯಗಳ ಬಗ್ಗೆ ತಿಳುವಳಿಕೆ ನೀಡಿ, ಶಿಶು ಮರಣ, ಹುಟ್ಟು ಮತ್ತು ಸಾವುಗಳ ಪ್ರಮಾಣ ಇಳಿಸುವುದು ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರ ಆರೋಗ್ಯದ ಬಗ್ಗೆ ಜ್ಞಾನವನ್ನು ಪ್ರಸಾರ ಮಾಡುವುದು.
2. ಸಂಪೂರ್ಣ ರೋಗ ನಿರೋಧಕ ಲಸಿಕೆಗಳನ್ನು ಹಾಕಿಸುವುದು.
3. ಪ್ರಥಮ ಚಿಕಿತ್ಸೆಯನ್ನು ಜನರಿಗೆ ತಿಳಿಸುವುದು.
4. ಕುಡಿಯುವ ನೀರನ್ನು ಸ್ವಚ್ಛವಾಗಿರಿಸಿ, ಅವುಗಳಿಂದ ಬರುವ ರೋಗಗಳನ್ನು ತಡೆಗಟ್ಟುವುದು.

5. ಮಗುವಿನ ಆರೋಗ್ಯದ ಬಗ್ಗೆ ಹೆಚ್ಚು ತರಬೇತಿ ಮತ್ತು ಕಾಳಜಿ ವಹಿಸುವುದು.
6. ಸಾಂಕ್ರಾಮಿಕ ರೋಗಗಳನ್ನು ಹರಡದಂತೆ ತಡೆಗಟ್ಟುವುದು.
7. ಅಸ್ತಿತ್ವದಲ್ಲಿರುವ ಆರೋಗ್ಯ ಕೇಂದ್ರಗಳನ್ನು ಆಧುನಿಕಗೊಳಿಸುವುದು.

**VI ಸ್ವಾವಲಂಬನೆ ಮತ್ತು ಅಭಿವೃದ್ಧಿಗಾಗಿ ಸಾಕ್ಷರತೆ**

1. ಜನರಿಗೆ ತಮ್ಮ ಅಭಿವೃದ್ಧಿಯ ಬಗ್ಗೆ. ಸ್ವಾವಲಂಬನೆಯ ಬಗ್ಗೆ ಭರವಸೆಯನ್ನು ಮೂಡಿಸಿ ಅವರೇ ಅವರ ಅಭಿವೃದ್ಧಿಯ ಬಗ್ಗೆ ಯೋಚಿಸುವಂತೆ ಮಾಡಲು ಯೋಜನೆ ತಯಾರಿಸುವುದು.
2. ಅಭಿವೃದ್ಧಿ ಪಡಿಸಿದ ಯೋಜನೆಗಳು ಜನರ ತಾರ್ಕಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸಲು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು.
3. ಪ್ರಾದೇಶಿಕ ಆರ್ಥಿಕ ಸ್ಥಿತಿಯನ್ನು ವಿಶ್ವ ಆರ್ಥಿಕ ಸ್ಥಿತಿಗೆ ಹೋಲಿಸುವುದು. ವಿಶ್ವ ಆರ್ಥಿಕ ಸ್ಥಿತಿಗಿಂತ ಬಲವಾದ ಆರ್ಥಿಕ ಸ್ಥಿತಿಯನ್ನು ರೂಪಿಸಲು ಮುಂದುವರಿದ ವಿಜ್ಞಾನ ಮತ್ತು ತಂತ್ರಜ್ಞಾನದ ಅವಶ್ಯಕತೆಯ ಬಗ್ಗೆ ತಿಳುವಳಿಕೆ ನೀಡುವುದು. ಇದು ವಿಜ್ಞಾನಿಗಳಿಗೆ. ತಂತ್ರಜ್ಞಾನಿಗಳಿಗೆ ಒಂದು ಪಂಥಾಹ್ವಾನ.
4. ಭಾರತದಲ್ಲಿ ಪ್ರಾದೇಶಿಕ ವಲಯಗಳೆಂದರೆ ಪಂಚಾಯತಿಗಳು. ತಾಲ್ಲೂಕುಗಳು ಮತ್ತು ಜಿಲ್ಲೆಗಳು. ಪ್ರಜಾಪ್ರಭುತ್ವವನ್ನು ಪಂಚಾಯತ್ ಮಟ್ಟದಲ್ಲಿ ಬಲಪಡಿಸುವುದೆಂದರೆ ಒಂದು ಕಡೆ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಜಿಲ್ಲೆ, ರಾಜ್ಯಗಳಿಂದ ಪಡೆಯುವುದು. ಮತ್ತೊಂದು ಕಡೆ ಶೋಷಣೆಗೊಳಗಾದ ಜನ ಕೂಡ ಅಧಿಕಾರವನ್ನು ಪಡೆಯಬಹುದಾದ ಸಾಧ್ಯತೆ ನಿರ್ಮಿಸುವುದು.
5. ಶೇಕಡಾ 80ಕ್ಕಿಂತ ಹೆಚ್ಚಿನ ಜನ ಬಡತನದಿಂದ ಶೋಷಿತರಾಗಿ ಸತತವಾಗಿ ತುಳಿತಕ್ಕೊಳಗಾಗಿದ್ದಾರೆ. ಅವರು ಇಂದು(ಅನಕ್ಷರಸ್ಥರು) ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಒಂದು ಮಾತನಾಡಲೂ ಅಸಮರ್ಥರು. ಅವರ ಮೊದಲ ಯುದ್ಧ ಅನಕ್ಷರತೆಯ ವಿರುದ್ಧ. ಇದು ಈಗಾಗಲೇ ಜಾರಿಯಲ್ಲಿದೆ. ಎರಡನೇ ಹೆಜ್ಜೆ ವಿಜ್ಞಾನ ಮತ್ತು ತಂತ್ರಜ್ಞಾನದ ಶಿಕ್ಷಣ. ಈ ಕಾರಣಕ್ಕಾಗಿಯೇ ಅಕ್ಷರಸ್ಥರಾಗಿ ಮಾಡುವುದು ಮೊದಲ ಹೆಜ್ಜೆ ಹಾಗೂ ಆದ್ಯ ಕರ್ತವ್ಯ.
6. ಕೇರಳದಲ್ಲಿ ಇನ್ನೊಂದು ವಿಧವಾದ ಆಂದೋಲನ ಶುರುವಾಗಿದೆ. ಹಳ್ಳಿಯ ಪಂಚಾಯತಿಯ ಮಟ್ಟದಲ್ಲಿ ರಾಜ್ಯದ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ಮತ್ತು ಭೂಮಿಯ ನಕ್ಷೆಯನ್ನು ಮಾಡಿ ಹಳ್ಳಿಯ ಜನರಿಗೆ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಮೂಲದಿಂದಲೇ ಬಂದ ಯೋಜನೆಗಳು ಕೇವಲ ನಕ್ಷೆಗಳಾಗದೇ ಯಶಸ್ವಿಯಾಗುವುದು

5. ಜನ ಇದರಲ್ಲಿ ಪಾಲ್ಗೊಂಡು, ಜವಾಬ್ದಾರಿ ವಹಿಸಿ, ಪ್ರಾಥಮಿಕ ಶಿಕ್ಷಣ ಯೋಜನೆ, ಸಂಪೂರ್ಣ ಯಶಸ್ವಿಯಾಗುವಂತೆ ಪ್ರಯತ್ನ ಮಾಡುವುದು.

**III ಜ್ಞಾನ ಸಂಪಾದನೆಗೆ ಓದು ಮತ್ತು ಸಾಂಸ್ಕೃತಿಕ ಪರಿಚಯ**

1. ಓದುವ ಹವ್ಯಾಸವನ್ನು ಬೆಳೆಸುವುದು ಮತ್ತು ಸುಶಿಕ್ಷಿತ ಸಮಾಜವನ್ನು ನಿರ್ಮಿಸಲು ಹೋರಾಡುವುದು.
2. ಜನರ ಸಹಾಯದಿಂದ ಹೆಚ್ಚು ಗ್ರಂಥಾಲಯಗಳನ್ನು ತೆರೆಯುವುದು.
3. ಗ್ರಂಥಾಲಯಗಳನ್ನು ಜ್ಞಾನ ಮತ್ತು ಸಂಸ್ಕೃತಿಯ ಕೇಂದ್ರಗಳನ್ನಾಗಿ ಮಾಡುವುದು.
4. ಸಾಂಸ್ಕೃತಿಕ ಪ್ರತಿಭೆಯನ್ನು ಪ್ರೋತ್ಸಾಹಿಸುವುದು, ಬೆಳೆಸುವುದು ಮತ್ತು ಪರಿಚಯಿಸುವುದು. ಇದರಿಂದ ಸಾಂಸ್ಕೃತಿಕ ಇಬ್ಭಾಗ ಮಾಡಲು ಇಚ್ಛಿಸುವ ಶಕ್ತಿಗಳನ್ನು ಎದುರಿಸುವುದು.

**IV ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಸಾಕ್ಷರತೆ**

1. ಆಂದೋಲನದಲ್ಲಿ ಭಾಗವಹಿಸಿದ ಮಹಿಳಾ ವರ್ಗವನ್ನು ಬಲಪಡಿಸಿ ಅವರ ಸಂಖ್ಯೆಯನ್ನು ವೃದ್ಧಿಸುವುದು.
2. ಮುಂದೆ ಬರುವ ಕಲಿತ ಮಹಿಳೆಯರಿಂದ ಸಮಾಜದ ಹಿಡುಗಿನ ವಿರುದ್ಧ ಹೋರಾಡುವಂತೆ ಪ್ರೋತ್ಸಾಹಿಸುವುದು.
3. ಮಹಿಳೆಯರ ಹಕ್ಕುಗಳ ಮತ್ತು ಸ್ವಾತಂತ್ರ್ಯದ ಬಗ್ಗೆ ತಿಳುವಳಿಕೆ
4. ಮಹಿಳೆಯರನ್ನು ಸಂಘಟಿಸಿ ಅವರನ್ನು ತಮ್ಮ ಹಕ್ಕುಗಳಿಗೆ ಹೋರಾಡಲು ತರಬೇತಿ ನೀಡುವುದು ಮತ್ತು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು.

**V ಆರೋಗ್ಯಕ್ಕಾಗಿ ಸಾಕ್ಷರತೆ**

1. ಅನೇಕ ಆರೋಗ್ಯ ವಿಷಯಗಳ ಬಗ್ಗೆ ತಿಳುವಳಿಕೆ ನೀಡಿ, ಶಿಶು ಮರಣ, ಹುಟ್ಟು ಮತ್ತು ಸಾವುಗಳ ಪ್ರಮಾಣ ಇಳಿಸುವುದು ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರ ಆರೋಗ್ಯದ ಬಗ್ಗೆ ಜ್ಞಾನವನ್ನು ಪ್ರಸಾರ ಮಾಡುವುದು.
2. ಸಂಪೂರ್ಣ ರೋಗ ನಿರೋಧಕ ಲಸಿಕೆಗಳನ್ನು ಹಾಕಿಸುವುದು.
3. ಪ್ರಥಮ ಚಿಕಿತ್ಸೆಯನ್ನು ಜನರಿಗೆ ತಿಳಿಸುವುದು.
4. ಕುಡಿಯುವ ನೀರನ್ನು ಸ್ವಚ್ಛವಾಗಿರಿಸಿ, ಅವುಗಳಿಂದ ಬರುವ ರೋಗಗಳನ್ನು ತಡೆಗಟ್ಟುವುದು.

5. ಮಗುವಿನ ಆರೋಗ್ಯದ ಬಗ್ಗೆ ಹೆಚ್ಚು ತರಬೇತಿ ಮತ್ತು ಕಾಳಜಿ ವಹಿಸುವುದು.
6. ಸಾಂಕ್ರಾಮಿಕ ರೋಗಗಳನ್ನು ಹರಡದಂತೆ ತಡೆಗಟ್ಟುವುದು.
7. ಅಸ್ತಿತ್ವದಲ್ಲಿರುವ ಆರೋಗ್ಯ ಕೇಂದ್ರಗಳನ್ನು ಆಧುನಿಕಗೊಳಿಸುವುದು.

**VI ಸ್ವಾವಲಂಬನೆ ಮತ್ತು ಅಭಿವೃದ್ಧಿಗಾಗಿ ಸಾಕ್ಷರತೆ**

1. ಜನರಿಗೆ ತಮ್ಮ ಅಭಿವೃದ್ಧಿಯ ಬಗ್ಗೆ. ಸ್ವಾವಲಂಬನೆಯ ಬಗ್ಗೆ ಭರವಸೆಯನ್ನು ಮೂಡಿಸಿ ಅವರೇ ಅವರ ಅಭಿವೃದ್ಧಿಯ ಬಗ್ಗೆ ಯೋಚಿಸುವಂತೆ ಮಾಡಲು ಯೋಜನೆ ತಯಾರಿಸುವುದು.
2. ಅಭಿವೃದ್ಧಿ ಪಡಿಸಿದ ಯೋಜನೆಗಳು ಜನರ ತಾರ್ಕಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸಲು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು.
3. ಪ್ರಾದೇಶಿಕ ಆರ್ಥಿಕ ಸ್ಥಿತಿಯನ್ನು ವಿಶ್ವ ಆರ್ಥಿಕ ಸ್ಥಿತಿಗೆ ಹೋಲಿಸುವುದು. ವಿಶ್ವ ಆರ್ಥಿಕ ಸ್ಥಿತಿಗಿಂತ ಬಲವಾದ ಆರ್ಥಿಕ ಸ್ಥಿತಿಯನ್ನು ರೂಪಿಸಲು ಮುಂದುವರಿದ ವಿಜ್ಞಾನ ಮತ್ತು ತಂತ್ರಜ್ಞಾನದ ಅವಶ್ಯಕತೆಯ ಬಗ್ಗೆ ತಿಳುವಳಿಕೆ ನೀಡುವುದು. ಇದು ವಿಜ್ಞಾನಿಗಳಿಗೆ. ತಂತ್ರಜ್ಞಾನಿಗಳಿಗೆ ಒಂದು ಪಂಥಾಹ್ವಾನ.
4. ಭಾರತದಲ್ಲಿ ಪ್ರಾದೇಶಿಕ ವಲಯಗಳೆಂದರೆ ಪಂಚಾಯತಿಗಳು. ತಾಲ್ಲೂಕುಗಳು ಮತ್ತು ಜಿಲ್ಲೆಗಳು. ಪ್ರಜಾಪ್ರಭುತ್ವವನ್ನು ಪಂಚಾಯತ್ ಮಟ್ಟದಲ್ಲಿ ಬಲಪಡಿಸುವುದೆಂದರೆ ಒಂದು ಕಡೆ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಜಿಲ್ಲೆ. ರಾಜ್ಯಗಳಿಂದ ಪಡೆಯುವುದು. ಮತ್ತೊಂದು ಕಡೆ ಶೋಷಣೆಗೊಳಗಾದ ಜನ ಕೂಡ ಅಧಿಕಾರವನ್ನು ಪಡೆಯಬಹುದಾದ ಸಾಧ್ಯತೆ ನಿರ್ಮಿಸುವುದು.
5. ಶೇಕಡಾ 80ಕ್ಕಿಂತ ಹೆಚ್ಚಿನ ಜನ ಬಡತನದಿಂದ ಶೋಷಿತರಾಗಿ ಸತತವಾಗಿ ತುಳಿತಕ್ಕೊಳಗಾಗಿದ್ದಾರೆ. ಅವರು ಇಂದು(ಅನಕ್ಷರಸ್ಥರು) ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಒಂದು ಮಾತನಾಡಲೂ ಅಸಮರ್ಥರು. ಅವರ ಮೊದಲ ಯುದ್ಧ ಅನಕ್ಷರತೆಯ ವಿರುದ್ಧ. ಇದು ಈಗಾಗಲೇ ಜಾರಿಯಲ್ಲಿದೆ. ಎರಡನೇ ಹೆಜ್ಜೆ ವಿಜ್ಞಾನ ಮತ್ತು ತಂತ್ರಜ್ಞಾನದ ಶಿಕ್ಷಣ. ಈ ಕಾರಣಕ್ಕಾಗಿಯೇ ಅಕ್ಷರಸ್ಥರಾಗಿ ಮಾಡುವುದು ಮೊದಲ ಹೆಜ್ಜೆ ಹಾಗೂ ಆದ್ಯ ಕರ್ತವ್ಯ.
6. ಕೇರಳದಲ್ಲಿ ಇನ್ನೊಂದು ವಿಧವಾದ ಆಂದೋಲನ ಶುರುವಾಗಿದೆ. ಹಳ್ಳಿಯ ಪಂಚಾಯತಿಯ ಮಟ್ಟದಲ್ಲಿ ರಾಜ್ಯದ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ಮತ್ತು ಭೂಮಿಯ ನಕ್ಷೆಯನ್ನು ಮಾಡಿ ಹಳ್ಳಿಯ ಜನರಿಗೆ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಮೂಲದಿಂದಲೇ ಬಂದ ಯೋಜನೆಗಳು ಕೇವಲ ನಕ್ಷೆಗಳಾಗದೇ ಯಶಸ್ವಿಯಾಗುವುದು

ಖಂಡಿತ. ಈ ಕೆಲಸದಲ್ಲಿ ಸುಮಾರು50,000 ಜನರಿಗೆ ತರಬೇತಿ ನೀಡಿ. ನಕ್ಷೆ ತಯಾರಿಸುವ ಕಾಲದಲ್ಲಿ ಅರ್ಧ ಮಿಲಿಯನ್ ಜನರನ್ನು ಸೇರಿಸಿಕೊಳ್ಳಲಾಗುವುದು.

**VIIಸಾಕ್ಷರತೆಯಿಂದ ಸಾಮಾಜಿಕ ಬದಲಾವಣೆಯೆಡೆಗೆ**


ಸಮಾಜದ ಬದಲಾವಣೆಗೆ ಆಗಬೇಕಾದ ಹೋರಾಟ ಆಗಬೇಕಾಗಿರುವುದು ದೆಹಲಿಯಲ್ಲಿ ಅಲ್ಲ. ಭಾರತದ ಹಳ್ಳಿ ಹಳ್ಳಿಗಳಲ್ಲಿ. ನಿಜವಾದ ಪ್ರಜಾಪ್ರಭುತ್ವಕ್ಕಾಗಿ ಹೋರಾಟ. ಇದು ಹಳ್ಳಿಗಳಿಂದ ಶುರುವಾಗಿ ದೆಹಲಿಯನ್ನು ಮುಟ್ಟಬೇಕು. ಸಾಕ್ಷರತೆ ಒಂದು ಆಶಾಕಿರಣ. ವಿಜ್ಞಾನ. ಪ್ರಾದೇಶಿಕ ಯೋಜನೆ. ಇವುಗಳು ಹೋರಾಟದ ತಳಹದಿ. This is a micro action planned on a macro scale. ಇದು ಕೇಂದ್ರದಲ್ಲಿ ಯೋಜಿಸಲಾದ ಒಂದು ಪ್ರಾದೇಶಿಕ ಆಂದೋಲನ.

ಜನರ ಸಾಕ್ಷರತಾ ಆಂದೋಲನ ಇವೆಲ್ಲಾ ಸಾಧ್ಯತೆಗಳನ್ನೂ ಒಳಗೊಂಡಿದೆ. ಆದರೆ ಮೊದಲ ಹೆಜ್ಜೆ ಮೊದಲ ನಂತರವೇ ಎರಡನೇ ಹೆಜ್ಜೆ. ಆ ಮೊದಲು ಹೆಜ್ಜೆಯೇ ಸಾಕ್ಷರತೆ. ಬರೆಯಲು. ಓದಲು ಮತ್ತು ಲೆಕ್ಕ ಹಾಕಲು ಬರಬೇಕು. ಹತ್ತು. ಇಪ್ಪತ್ತು. ಮೂವತ್ತು ಮಿಲಿಯನ್ ಜನರು ಕಲಿಕೆಯ ಕಾರ್ಯದಲ್ಲಿ ತೊಡಗಿದ್ದಾರೆ. ಆದರಲ್ಲಿ ಮಹಿಳೆಯರೇ ಹೆಚ್ಚು........ ಎರಡು ಮೂರು ಮಿಲಿಯ ಸ್ವಯಂ ಸೇವಕರು ಕಲಿಸುತ್ತಿರುವಾಗ........ ಏನೋ ಒಂದು ಅಸಾಧಾರಣವಾದದ್ದು ಆಗುತ್ತಿದೆ....... ಒಳ್ಳೆಯದಕ್ಕಾಗಿ.

ನಾವು ಮತ್ತೊಮ್ಮೆ ನಳಂದವನ್ನು ಕಟ್ಟಬಹುದು.

ನಾವು ಪ್ರಪಂಚಕ್ಕೆ ಪ್ರಜಾಪ್ರಭುತ್ವವೆಂದರೆ ಏನು? ಎಂಬುದನ್ನು ತೋರಿಸೋಣ. ನಾವು ಮಾನವೀಯತೆಯನ್ನು ಸ್ಥಿರಗೊಳಿಸೋಣ. ಇದು ನಾಶವಾಗದಂತೆ ತಡೆಯೋಣ. ಇದೆಲ್ಲಾ ಕನಸಿರಬಹುದು. ಆದರೆ ಕನಸುಗಳು ಚಿಂತನೆಯನ್ನು ಮೂಡಿಸುತ್ತವೆ. ಚಿಂತನೆಗಳು ಯೋಜನೆಗಳನ್ನು ಹುಟ್ಟಿಸುತ್ತವೆ. ಯೋಜನೆಗಳು ಕಾರ್ಯಪರರಾಗಲು ಸಹಾಯವಾಗುತ್ತವೆ. ಹೌದು. ನಾವೆಲ್ಲಾ ಒಟ್ಟಿಗೆ ಕನಸು ಕಟ್ಟೋಣ.

■






# ಸಂಸ್ಥೆ

1. ಭಾರತ ಜ್ಞಾನ ವಿಜ್ಞಾನ ಸಮಿತಿಯು 80 ಜನರ ಜನರಲ್ ಸಮಿತಿ ಮತ್ತು 13 ಜನರ ಕಾರ್ಯಕಾರಿ ಸಮಿತಿಯನ್ನು ರಾಷ್ಟ್ರಮಟ್ಟದಲ್ಲಿ ಹೊಂದಿದೆ.
2. ಇದೇ ಸಮಯದಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಗಳು ರಾಜ್ಯದಲ್ಲಿಯೂ ಇವೆ. ರಾಜ್ಯ ಸಮಿತಿಗಳು ಜಿಲ್ಲಾ ಮಟ್ಟದ ಸಮಿತಿಗಳನ್ನು ಮತ್ತು ವ್ಯಕ್ತಿಗಳನ್ನು ಹೊಂದಿರುವವು.
3. ಕೆಲವು ಜಿಲ್ಲೆಗಳಲ್ಲಿ ಭಾರತ ಜ್ಞಾನ-ವಿಜ್ಞಾನ ಸಮಿತಿಯು. ಜಿಲ್ಲಾ ಸಾಕ್ಷರ ಸಮಿತಿಯನ್ನು ಸಾಕ್ಷರತಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಚಿಸಿದೆ.
4. ಯಾವುದೇ ವ್ಯಕ್ತಿ ಅಥವಾ ಗುಂಪು. ಅವನು ಅಥವಾ ಅವಳು ಸರಕಾರಿ ನೌಕರರಿರಬಹುದು. ಸರ್ಕಾರೇತರ ಸಂಘಗಳ ಕಾರ್ಯಕರ್ತರಿರಬಹುದು. ಅವರು ಆಯಾ ರಾಜ್ಯದ ಅಥವಾ ಜಿಲ್ಲೆಯ ಶಾಖೆಗಳಲ್ಲಿ ಸದಸ್ಯರಾಗಬಹುದು. ಅವರು ಭಾರತ ಜ್ಞಾನ-ವಿಜ್ಞಾನ ಸಮಿತಿಯ ಕಾರ್ಯಕ್ರಮಗಳಲ್ಲಿ ತಮ್ಮ ಸಹಯೋಗವನ್ನು ನೀಡಬೇಕು. ಅದರಲ್ಲೂ ಸಾಕ್ಷರತಾ ಕಾರ್ಯಕ್ರಮಕ್ಕೆ ಹೆಚ್ಚು ಬೆಂಬಲ ನೀಡಬೇಕು.
5. ರಾಷ್ಟ್ರದ. ರಾಜ್ಯದ ಮತ್ತು ಜಿಲ್ಲಾ ಸಮಿತಿಗಳಲ್ಲಿ ಅಷ್ಟೇನು ಬಲವಾದ ಸಂಪರ್ಕ ಇರಲೇಬೇಕೆನ್ನುವುದು ಅಪ್ರಾಸಂಗಿಕ. ಆದರೆ ಪ್ರಾದೇಶಿಕ ವಿಜ್ಞಾನ ಸಂಘಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.
6. ಭಾರತ ಜ್ಞಾನ-ವಿಜ್ಞಾನ ಸಮಿತಿಯು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಮತ್ತು ರಾಷ್ಟ್ರೀಯ ಸಾಕ್ಷರತಾ ಆಂದೋಲನದವರ ಸಹಭಾಗಿತ್ವ ಮತ್ತು ಸಹಾಯದಿಂದ. ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಕೆಲಸ ಮಾಡುತ್ತಿದೆ.



Printed and Published by General Secretary. Bharath Gyan Vigyan Samithi. C/o Electro Chemical Society of India. Indian Institute of Science. Bangalore-12. Printed at Anand Process.



# ಭಾರತ ಜ್ಞಾನ ವಿಜ್ಞಾನ ಸಮಿತಿಯ-ನಕ್ಷೆ

1. ಮೊದಲಿನಿಂದಲೂ ಜನರ ಬೆಂಬಲವನ್ನು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಒದಗಿಸಿಕೊಡುವುದು.

2. ಯೋಜನೆಯ ಎಲ್ಲಾ ಹಂತಗಳಲ್ಲೂ ಸಹಕರಿಸುವುದು–ಜನರನ್ನು ಪರಿಸರವನ್ನು ಯೋಜನೆಯ ಸಹಾಯಕ್ಕೆ ತಿರುಗಿಸುವುದು–ತರಬೇತಿ ನೀಡುವುದು, ಜನರ ಬೆಂಬಲವನ್ನು ಬಲಗೊಳಿಸಿ ಕಾಯ್ದಿರಿಸುವುದು.

3. ಸತತವಾಗಿ ಅಧಿಕಾರಿಗಳ, ರಾಜಕಾರಣಿಗಳ, ಸ್ವಯಂ ಸೇವಾ ಸಂಘಗಳ, ಕಾರ್ಮಿಕ ಸಂಘಗಳ, ಬುದ್ಧಿಜೀವಿಗಳ ಸಂಪರ್ಕವಿಟ್ಟುಕೊಂಡು ಸಾಕ್ಷರತಾ ಆಂದೋಲನಕ್ಕೆ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡುವುದು.

4. ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕೇಂದ್ರಗಳನ್ನು ತೆರೆದು ಸಾಕ್ಷರತಾ ಆಂದೋಲನವನ್ನು ಸ್ಥಿರಗೊಳಿಸುವುದು. ಇದರಿಂದ ಸಾಕ್ಷರತಾ ಕಾರ್ಯಕ್ರಮದ ನಂತರವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಆರೋಗ್ಯ, ಸಾಂಸ್ಕೃತಿಕ ಜಾಗೃತಿ ಮುಂದುವರಿಸಲು ಸಹಾಯ ಮಾಡಲಾಗುವುದು. ಸಂಘಟನೆಗಳನ್ನು ರಚಿಸುವುದು ಮತ್ತು ಜನರೊಂದಿಗೆ ವಿಶ್ವಾಸದಿಂದ ಸಂಪರ್ಕ, ಹೊಂದಿರುವುದು ಪ್ರಜಾಪ್ರಭುತ್ವದಲ್ಲಿ ಜನರನ್ನು ಅಭಿವೃದ್ಧಿಯ ಕಡೆಗೆ ಸೆಳೆದೊಯ್ಯಲು ಸಹಾಯಕವಾಗುವುದು.

